REGD.NEWS PAPER RNI 50347/1989
RNI.Reg.No.KA/BGGPO/2516/2021-23
Licenced to post without Pre-payment
Registered Regn.No.
WPP.CO-1
Posted at BANGALORE PSO, MYSORE ROAD,
BANGALORE – 560026

Date of publication 18th of every month
Permitted to post on 31st may instead of 20th or 21st

**ಕರ್ನಾಟಕ ಆರ್ಯವೈಶ್ಯ ಮಹಾಸಭಾ(ರಿ)**
ನಂ. 16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009
ದೂರವಾಣಿ : 080-22206151 - 22206152- 22206153 E-mail : kavmss@gmail.com
Website : www.karnatakaaryavysyamahasabha.com



# ವಾರ್ತಾಪತ್ರ

## ಕನ್ನಡ ಮಾಸ ಪತ್ರಿಕೆ

ಸಂಪಾದಕರು
ರಾ.ಪ. ರವಿಶಂಕರ್

ಕಾರ್ಯಾಲಯ ಸಮಯ { ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : ೩೫ ಮೇ ೨೦೨೨ ಬೆಲೆ : ೧ ರೂ. ಪುಟಗಳು : ೮ ಸಂಚಿಕೆ : ೫

## ಅಧ್ಯಕ್ಷರ ನುಡಿ

**2022–27ರ ಅವಧಿಯ ಕಾರ್ಯಕಾರಿ ಸಮಿತಿ ಚುನಾವಣೆಗಳನ್ನು ಸುಸೂತ್ರವಾಗಿ ನಡೆಸಿಕೊಟ್ಟಂತಹ ಪ್ರತಿಯೊಬ್ಬ ಸದಸ್ಯರನ್ನು, ಚುನಾವಣಾಧಿಕಾರಿಗಳನ್ನು, ಸಮನ್ವಯಕಾರರನ್ನು, ಸಿಬ್ಬಂದಿವರ್ಗದವರನ್ನು, ಮತ್ತು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರನ್ನೂ ಮಹಾಸಭೆ ಹಾರ್ದಿಕವಾಗಿ ಅಭಿನಂದಿಸುತ್ತದೆ.**



**ನಾನು ಹುಟ್ಟಿದೆ ಸಾಮರ್ಥ್ಯದೊಡನೆ, ನಾನು ಹುಟ್ಟಿದೆ ಒಳ್ಳೆಯತನ ಹಾಗೂ ನಂಬಿಕೆಯೊಡನೆನಾನು ಹುಟ್ಟಿದೆ ವಿಚಾರಗಳೊಂದಿಗೆ, ಕನಸುಗಳೊಂದಿಗೆ; ನಾನು ಹುಟ್ಟಿದೆ ಮಹತ್ತಿಕೆಯೊಡನೆ, ನಾನು ಹುಟ್ಟಿದೆ ಆತ್ಮ ವಿಶ್ವಾಸದೊಡನೆ, ನಾನು ಹುಟ್ಟಿದೆ ಧೈರ್ಯದೊಡನೆ, ನಾನು ಸಮಸ್ಯೆಗಳ ಸೋಲಿಸುವೆ, ಜಯಶೀಲನಾಗುವೆ, ನಾನು ಹುಟ್ಟಿದೆ ರೆಕ್ಕೆಗಳೊಡನೆ, ತೆವಳುವುದು ನನ್ನ ಜಾಯಮಾನವಲ್ಲ, ನನಗೆ ರೆಕ್ಕೆಗಳಿವೆ, ನಾನು ಹಾರುವೆ, ನಾನು ಹಾರುವೆ ನಾನು ಹಾರುವೆ,** ಎಂಬ ಸ್ಫೂರ್ತಿದಾಯಕ ನುಡಿಮುತ್ತುಗಳೇ ನಾನು ಸಹ ಜೀವನದಲ್ಲಿ ಕೆಲವು ಉತ್ತಮ ಕೆಲಸಗಳನ್ನು ಮಾಡಲು ಚೈತನ್ಯ ತುಂಬಿ – ತಮ್ಮಂತಹ ಸಹಸ್ರಾರು ಭಾಂದವರ ಸೇವೆ ಮಾಡಲು ಅವಕಾಶ ದೊರೆಯಿತು.

21.10.2009 ನಾನು ಅಧ್ಯಕ್ಷನಾಗಿ ಚುನಾಯಿತನಾಗಿ ಅಧಿಕಾರ ವಹಿಸಿಕೊಂಡ ಪವಿತ್ರ ದಿನ. ಅಲ್ಲಿಂದ **ನಮ್ಮ ತಂಡ ಪಡೆದ ಸೇವಾದೀಕ್ಷೆ ನಂತರ ಮೂಡಿ ಬಂದ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ ಮೂರನೇ ಅವಧಿಗೆ ಮತ್ತೊಮ್ಮೆ ಅವಿರೋಧವಾಗಿ ಅಧ್ಯಕ್ಷರನ್ನು ಆಯ್ಕೆ ಮಾಡುವ ಮೂಲಕ ಸದಸ್ಯರು ಅಭಿವೃದ್ಧಿಗೆ ಜೈ ಎಂದಿದ್ದಾರೆ** 01.05.2016ರಂದು ನಡೆದ ಚುನಾವಣೆಗಳಲ್ಲಿ 16 ಜಿಲ್ಲೆಗಳಲ್ಲಿ ಅವಿರೋದ ಆಯ್ಕೆ, ಕೇವಲ 7 ಜಿಲ್ಲೆಗಳಲ್ಲಿ ಚುನಾವಣೆಗಳು ನಡೆದು ಒಟ್ಟಾರೆ ಶೇ ನೂರಕ್ಕೆ ನೂರು ಕಾರ್ಯಕಾರಿ ಸಮಿತಿ ಸದಸ್ಯರು ನನ್ನ ತಂಡದವರೇ ಆಯ್ಕೆಯಾಗಿದ್ದು ಮಹಾಸಭೆಯಲ್ಲಿ ಇತಿಹಾಸ ಸೃಷ್ಟಿಸಿತು. ಮುಂದುವರೆದ ಅಭಿವೃದ್ಧಿ ಕಾರ್ಯಗಳ ನಾಗಾಲೋಟದಿಂದ ದಿನಾಂಕ 01.05.2022ರಂದು ನಡೆದ ಚುನಾವಣೆಗಳಲ್ಲಿ 23 ಜಿಲ್ಲೆಗಳ ಪೈಕಿ 20 ಜಿಲ್ಲೆಗಳಲ್ಲಿ ಅವಿರೋದ ಆಯ್ಕೆ ಕೇವಲ 3 ಜಿಲ್ಲೆಗಳಲ್ಲಿ ಮಾತ್ರ ಚುನಾವಣೆ, ಈ ಚುನಾವಣೆಗಳಲ್ಲಿಯೂ **ಶೇ. 100ಕ್ಕೆ 100ರಷ್ಟು ನನ್ನ ತಂಡದ ಅಭ್ಯರ್ಥಿಗಳನ್ನು ಸತತ ಎರಡನೇ ಭಾರಿಗೆ ಗೆಲ್ಲಿಸಿ ಕೊಟ್ಟಿರುವ ಮತದಾರ ಪ್ರಭುವಿಗೆ ನನ್ನ ಹೃದಯಾಂತರಾಳದ ನಮನಗಳು.**

ಬಹುದೊಡ್ಡ ಸಂಖ್ಯೆ ಸದಸ್ಯರು ತಮ್ಮ ನಾಮಪತ್ರಗಳನ್ನು ವಾಪಸ್ಸು ಪಡೆದರು ಎಂದ ಮಾತ್ರಕ್ಕೆ ಅವರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಭಯ, ಸೋಲುವ ಭೀತಿ ಎಂದು ಅರಿಯುವಂತಿಲ್ಲ, ಸಮಾಜದ ಹಿತ ದೃಷ್ಟಿಯಿಂದ ಹಾಗೂ ಮಹಾಸಭೆಯ ಮೇಲೆ ಬೀಳುವ ಆರ್ಥಿಕ ಒತ್ತಡಗಳನ್ನು ಗಮನದಲ್ಲಿರಿಸಿಕೊಂಡು ಯಾವುದೇ ಅಪೇಕ್ಷೆಗಳನ್ನು ಇಟ್ಟುಕೊಳ್ಳದೆ ಅವಿರೋದ ಆಯ್ಕೆಗೆ ಸಹಕರಿಸಿದ ಎಲ್ಲ ಬಂಧುಗಳಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ.

**ಮಾತು ಮನೆ ಕೆಡಿಸಿತು – ತೂತು ಒಲೆ ಕೆಡಿಸಿತು** ಎಂಬಂತೆ ಸುಖಾ ಸುಮ್ಮನೆ ತಮ್ಮ ಬಿರು ಮಾತುಗಳಿಂದ ಸಮಾಜದ ಗೌರವಕ್ಕೆ ಸಾರ್ವಭೌಮತ್ವಕ್ಕೆ ಧಕ್ಕೆ ತರುವಂತೆ ವರ್ತಿಸುತ್ತಿದ್ದ **ಟೀಕಾಕಾರರಿಗೆ ರಾಜ್ಯದ ಜನತೆ ಸೂಕ್ತ ಉತ್ತರವನ್ನು ನೀಡಿದೆ** ಹಾಗೂ ಅಭಿವೃದ್ಧಿ ಪರವಾಗಿ ಮತ ನೀಡಿ ಸಮಾಜ ಘಾತುಕ ಶಕ್ತಿಗಳಿಗೆ ಎಚ್ಚರಿಕೆಯ ಸಂದೇಶವನ್ನು ನೀಡಿದೆ.

**ಸಮಾಜ... ಪರಿವರ್ತನೆಗೆ ಸಿದ್ದವಾಗುವವರೆವಿಗೂ ನಾವು ಕಾಯಬೇಕೆಂಬುದು ಅಬಿವೃದ್ಧಿಗೆ ಪೂರಕವಾಗದ ಪೊಳ್ಳುವಾದ.** ಸತ್ವಭರಿತ ಚೈತನ್ಯಪೂರ್ಣ, ಸ್ಫೂರ್ತಿದಾಯಕ ತಂಡವೊಂದು – ಕಾಲಕ್ಕೆ ತಕ್ಕಂತೆ ಪದ್ದತಿಗಳನ್ನು ಬದಲಿಸಿಕೊಂಡು, ಹಳೆಯ ಆಚಾರಗಳಿಂದ ಹೊರಬರದ ಹೊರತು ಸಮಾಜ ಸುಧಾರಣೆ ಮಾಡಲು ಸಾದ್ಯವಾಗುವುದಿಲ್ಲ ಎಂಬ ಸತ್ಯವನ್ನು ಅಭಿವೃದ್ದಿ ಬಯಸುವ ಪ್ರತಿಯೊಬ್ಬರೂ ಒಪ್ಪಲೇ ಬೇಕಾದ ಮಾತು. ಬದಲಾವಣೆಗೆ ಒಪ್ಪಿಕೊಳ್ಳದ ಮನಸ್ಸುಗಳು ಟೀಕೆಗಳನ್ನು ಮಾಡುತ್ತಾ, ಸಾಧನೆಯ ಹಾದಿಗೆ ಅಡ್ಡಿ ಪಡಿಸುವುದು ಸಹಜ. ಆದರೆ ಅಂತಹ ಕೀಳು ಮನಸ್ಸುಗಳ ಕ್ಷುಲ್ಲಕ ಮಾತುಗಳಿಗೆ ಮತದಾರರು ಬೀಗ ಜಡಿದು, ಅಭಿವೃದ್ಧಿಗೆ ನಾಂದಿ ಹಾಡಿದ್ದಾರೆ.

**ಗುರಿಯೊಂದಕ್ಕೆ ನಾವು ಬದ್ದರಾದಾಗ ಮಾನಸಿಕ ಸ್ಥಿತಿ ಆಲೋಚನೆಯಿಂದ ಕ್ರಿಯೆಗೆ ಬದಲಾಗುತ್ತದೆ.** ಸಾಧಿಸುವ ಛಲವಿರುವ ನಮಗೆ ತಕ್ಷಣವೇ ಒಂದು ದಿಕ್ಕು ಹಾಗೂ ಧ್ಯೇಯ ಗುರುತು ಹತ್ತುತ್ತದೆ. ಅಂತಹ ಸ್ಪಷ್ಟ ಗುರುತುಗಳನ್ನು ಕಾರ್ಯರೂಪಕ್ಕೆ ಇಳಿಸಿ

### ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಾಮ್

ಮಹಾತ್ಮರ ಮನಸ್ಸಿನಲ್ಲಿರುವುದು ಒಂದೇ, ಮಾತಿನಲ್ಲಿರುವುದು ಒಂದೇ, ಕಾರ್ಯದಲ್ಲಿರವುದು ಒಂದೇ, ಅದೇ **ಪರೋಪಕಾರಾರ್ಥಂ ಇದಂ ಶರೀರಂ.** ಪರಿಶ್ರಮ ಪಡುವುದರಿಂದ ದೇಹಕ್ಕೆ ತ್ರಾಸವಾಗಬಹುದು, ಕಿರಿಕಿರಿಯೂ ಆಗಬಹುದು, ಆದರೆ ಅಂತಿಮ ಫಲಿತಾಂಶದಿಂದ ಸಿಗುವ ಸುಖ ಶಾಶ್ವತವಾಗಿರುತ್ತದೆ. ಎಲ್ಲರೂ ಕೆಲಸ ಮಾಡುತ್ತಾರೆ, ಆದರೆ ನಾವು ಮಾಡುವ ಕೆಲಸ ಇತರರಿಗೆ ಆದರ್ಶವಾಗಿರುವಂತೆ ಮಾಡಬೇಕು, ಅದಕ್ಕಾಗಿಯೇ ಉತ್ತಮ ಕೆಲಸಗಳನ್ನು ಮಾಡಲು ಅಗತ್ಯವಾದ ಪರಿಶ್ರಮ ಹಾಕಲು ಹಿಂದೆ ಹೋಗದೆ **ಸಾಧನೆಯ ಬೆನ್ನು ಹತ್ತಿ ಗುರಿ ತಲುಪುವವರೆವಿಗೂ ವಿಶ್ರಾಂತರಾಗಬಾರದು** ಎಂದು ಹಿರಿಯರು, ಅನುಭವಿಗಳು ಹೇಳಿದ ಮಾತುಗಳಂತೆ ನಮ್ಮ ತಂಡವು ಈ ಅವಧಿಯಲ್ಲಿ ಮಾಡಲು ಉದ್ದೇಶಿಸಿರುವ ಪ್ರತಿಯೊಂದು ಕೆಲಸವನ್ನು ಮಾಡಿಯೇ ತೀರುತ್ತೇವೆ. ಮಹಾಸಭೆಯ ಪ್ರತಿಯೊಂದು ಕೆಲಸ ಕಾರ್ಯಗಳಲ್ಲಿ ತಮ್ಮಗಳ ಸಂಪೂರ್ಣ ಸಹಕಾರ ಅತ್ಯಗತ್ಯ, ಅಭಿವೃದ್ದಿಯ ಜೊತೆಯಲ್ಲಿ ಮುಂದೆ ಸಾಗೋಣ. ಚುನಾವಣೆಗಳಲ್ಲಿ ಗೆದ್ದೇ ಗೆಲ್ಲುತ್ತೇನೆಂಬ ವಿಶ್ವಾಸದಿಂದ, ಅಥವಾ ವೈಯುಕ್ತಿಕ ದ್ವೇಷಾಸುಯೆಗಳಿಂದ **ಚುನಾವಣೆಯಲ್ಲಿ ಸ್ಪರ್ಧಿಸಿ ಪರಾಭವಗೊಂಡಿರುವವರಲ್ಲಿ ವಿಶೇಷ ಮನವಿ, ನಿಮ್ಮ ಸೋಲು–ಸೇಡಾಗಿ ಪರಿವರ್ತನೆಯಾಗುವುದು ಬೇಡ.** ಸೋಲೇ ಗೆಲುವಿನ ಮೆಟ್ಟಿಲೆಂದು ಮುಂದಿನ ಗೆಲುವಿಗಾಗಿ ಪ್ರಯತ್ನಗಳು ಮುಂದುವರೆಯ ಬೇಕೇ ವಿನ: ಸೇಡಿನ ಕ್ರಮಗಳಿಂದ ವ್ಯಕ್ತಿತ್ವವನ್ನು ಹಾಳು ಮಾಡಿಕೊಳ್ಳಬಾರದಾಗಿ ವಿನಂತಿ. ಸೋಲು ಗೆಲುವುಗಳ ಮದ್ಯೆ ವಿನಯ, ವಿನಮ್ರತೆ, ವಿಶ್ವಾಸರ್ಹತೆ ಬೆಳೆದು ಪ್ರತಿಯೊಬ್ಬರೂ **ಸಮಾಜದ ಆಸ್ತಿಗಳಾಗಿ, ಜನತೆಯ ಹೃದಯ ಸಿಂಹಾಸನದಲ್ಲಿ ಬೆಳಗಬೇಕು,** ತಪ್ಪಿದರೆ ಜನಮನದಲ್ಲಿ ವಿಲನ್‌ಗಳಾಗಿ ಸಮಾಜದಿಂದ ದೂರವಾಗ ಬೇಕಾಗುತ್ತದೆ. **ಕೆಳಕ್ಕೆ ಬಿದ್ದಾಗ ಬಿದ್ದ ಜಾಗವನ್ನು ನೋಡಬೇಡಿ, ಎಲ್ಲ ಜಾರಿದ್ದೀರಿ ಎಂಬುದನ್ನು ನೋಡಿ –** ತಪ್ಪುಗಳನ್ನು ಸರಿಪಡಿಸಿಕೊಂಡಲ್ಲಿ ಯಶಸ್ಸು ನಮ್ಮೊಂದಿಗಿರುತ್ತದೆ.

ಚುನಾವಣೆಯಲ್ಲಿ ಗೆದ್ದು ಬಂದವರು ಬೀಗುವುದು ಸಹಜ, ಆದರೆ ಅದಾವುದೂ ಎಲ್ಲೆಯನ್ನು ಮೀರಬಾರದು. ನಮ್ಮ ಮೇಲೆ ಅತ್ಯಂತ ವಿಶ್ವಾಸ ನಂಬಿಕೆಗಳನ್ನು ಸಮಾಜದ ಕೆಲಸಕಾರ್ಯ ನಿರ್ವಹಿಸುವ ಸೇವಕರೆಂದು ಜನತೆ ನಂಬಿದೆ. ಅಂತಹ ನಂಬಿಕೆಗಳಿಗೆ ದ್ರೋಹವಾಗದಂತೆ ನಮ್ಮ ಕೆಲಸ ಕಾರ್ಯಗಳು ನಡೆಯಬೇಕು. ಆಗ ಮಾತ್ರವೇ ಗೆಲುವು ಶೋಭಿಸುತ್ತದೆ, ತಪ್ಪಿದರೆ ನಮ್ಮ ವ್ಯಕ್ತಿತ್ವವನ್ನು ನಾವೇ ಕಳೆದುಕೊಳ್ಳುತ್ತೇವೆ. ತುಕ್ಕಿನ ಹೊರತಾಗಿ ಉಕ್ಕನ್ನು ಮತ್ಯಾವುದೋ ನಾಶ ಮಾಡುವುದಿಲ್ಲ. ಹಾಗೆಯೇ ಅಹಂ ಹೊರತಾಗಿ ನಮಗೆ ಬೇರಾವುದೂ ಕೆಡುಕನ್ನುಂಟು ಮಾಡಲು ಸಾಧ್ಯವಿಲ್ಲ, ನಿಮ್ಮ ಮೊಗ ಅರಳಲು ಕಾರಣರಾದವರಿಗೆ ಧನ್ಯವಾದಗಳನ್ನು ತಿಳಿಸಿ, ಕಾಡುವವರನ್ನು ಸಹಿಸಿಕೊಳ್ಳಿ, ಪರಸ್ಪರ ವಿಶ್ವಾಸ ನಂಬಿಕೆಗಳಿಂದ ಕಾರ್ಯ ಸಾಧಿಸಿ.

**ದೇವರು ನಮಗೆ ಕೊಟ್ಟಿರೋದು ಎರಡೇ ಆಯ್ಕೆ, ಒಂದು ಕೊಟ್ಟು ಹೋಗಬೇಕು, ಇನ್ನೋಂದು ಬಿಟ್ಟು ಹೋಗಬೇಕು. ತೆಗೆದು ಕೊಂಡು ಹೋಗುವ ಯಾವ ಆಯ್ಕೆಯೂ ನಮಗಿಲ್ಲ.** ಬದುಕು ಶೂನ್ಯ. ಇಲ್ಲಿಂದ ಹೋಗೋ ಮುಂಚೆ, ಪಾಪ ಪುಣ್ಯವೆಂಬ ಎರಡು ಬುಟ್ಟಿಗಳಲ್ಲಿ ಯಾವುದನ್ನು ತುಂಬಿಸಿಕೊಳ್ಳೋದು ಎಂಬ ಆಯ್ಕೆ ನಮ್ಮದೇ ಆಗಿದೆ. **ಜೀವನದಲ್ಲಿ ಗುರಿ ಇರಬೇಕೇ ಹೊರತು ಇನ್ನೊಬ್ಬರ ಮೇಲೆ ಉರಿ ಇರಬಾರದು** ಎಂದು ನಮ್ಮ ಹಿರಿಯರು ಕಲಿಸಿಕೊಟ್ಟ ನುಡಿ ಮುತ್ತುಗಳನ್ನು ಹಂತ ಹಂತವಾಗಿ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾ **ಹತ್ತು ಹಲವು ಸಂಘ ಸಂಸ್ಥೆಗಳ ಮೂಲಕ ಸಮಾಜದ ಋಣ ತೀರಿಸುವ ಒಂದು ನಿಷ್ಟಾವಂತ ಪ್ರಯತ್ನಕ್ಕೆ ಸಮಾಜದ ಬಂದುಗಳು ಕೈ ಜೋಡಿಸಿದಿರಿ, ಹರಸಿದಿರಿ, ಹಾರೈಸಿದಿರಿ, ಆಶೀರ್ವದಿಸಿದಿರಿ,** ಆ ನಿಮ್ಮ ಸ್ಫೂರ್ತಿಯಿಂದ ಮೂಡಿ ಬಂದ ಯೋಜನೆಗಳು ಇಂದಿಗೆ ಸಾವಿರಾರು ಕುಟುಂಬಗಳ ಪ್ರಗತಿಗೆ ಕಾರಣವಾಗಿದೆ. ಸಹಸ್ರಾರು ವಿದ್ಯಾರ್ಥಿಗಳಿಗೆ ಚೈತನ್ಯ ತಂದಿದೆ, ಸಮಾಜ ಎದ್ದಿದೆ, ಎಚ್ಚೆತ್ತಿದೆ, ಜಾಗೃತವಾಗಿದೆ. ಸಮಾಜದಲ್ಲಿ ಕಾಣುತ್ತಿರುವ ಈ ಬದಲಾವಣೆಯಿಂದ ಅಭಿವೃದ್ಧಿಯ ಸ್ಪಷ್ಟತೆ ಗೋಚರವಾಗುತ್ತಿದೆ. **ಅಮೃತ ಸದೃಶವಾದ ಸೇವೆ ಸಲ್ಲಿಸಲು ನಿರಂತರ ಮೂರನೇ ಅವಧಿಗೆ ಅವಿರೋಧವಾಗಿ ಅಧ್ಯಕ್ಷ ಸ್ಥಾನವನ್ನು ಕರುಣಿಸಿದ ಕುಲಮಾತೆ ಶ್ರೀ ವಾಸವಿ ಕನ್ಯಕಾಪರಮೇಶ್ವರಿ ದೇವಿಯ ಪಾದಾರವಿಂದಗಳಿಗೆ ನಮಸ್ಕರಿಸಿ** ಮುಂದೆ ಮತ್ತಷ್ಟು ಉತ್ತಮ ಕಾರ್ಯಕ್ರಮಗಳ ಮೂಲಕ ಸಮಾಜದ ಸರ್ವಾಂಗೀಣ ಅಭಿವೃದ್ಧಿಗಾಗಿ ನಮ್ಮ ತಂಡದೊಂದಿಗೆ ಕಾರ್ಯನಿರ್ವಹಿಸಲು ತಮ್ಮೆಲ್ಲರ ಸಲಹೆ ಸಹಕಾರಗಳನ್ನು ಬಯಸುವ


**ಆರ್ ಪಿ ರವಿಶಂಕರ್**
ಅಧ್ಯಕ್ಷರು

# ಆರ್.ಪಿ.ರವಿಶಂಕರ್‌ರವರ ಹ್ಯಾಟ್ರಿಕ್ ಜಯದೊಂದಿಗೆ ಮಹಾಸಭೆಯ ಅಭಿವೃದ್ಧಿ ಪಥಕ್ಕೆ ಆನೆಬಲ

**ಯಾವುದೇ ಯಶಸ್ಸನ್ನು ಪಡೆಯಲು ದೃಢ ಸಂಕಲ್ಪ ಹಾಗೂ ಅಪಾರ ಇಚ್ಛಾಶಕ್ತಿ ಬೇಕು. ದೃಢ ಸಂಕಲ್ಪದ ಮುಂದೆ ಪರ್ವತಗಳನ್ನೇ ಪುಡಿ ಪುಡಿ ಮಾಡುವಂತಹ ಶಕ್ತಿ ಮತ್ತು ಗಟ್ಟಿ ಗುಂಡಿಗೆಯನ್ನು ಹೊಂದಿದ್ದರೆ ಮಾತ್ರ ಗುರಿ ಸೇರುವುದು ನಿಶ್ಚಯ – ಸ್ವಾಮಿ ವಿವೇಕಾನಂದ**

**ಈ ಮೇಲಿನ ಸ್ವಾಮಿ ವಿವೇಕಾನಂದರ ಧ್ಯೇಯ ನುಡಿಯಂತೆ, ದೃಢ ಸಂಕಲ್ಪ ಮತ್ತು ಅಪಾರ ಇಚ್ಛಾಶಕ್ತಿಯನ್ನು ತನ್ನ ಜೀವವನ್ನಾಗಿಸಿಕೊಂಡಿರುವ ಸಹಕಾರ ರತ್ನ ಸನ್ಮಾನ್ಯ ಶ್ರೀ ಆರ್.ಪಿ.ರವಿಶಂಕರ್ ರವರು ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಅಧ್ಯಕ್ಷರಾಗಿ ಸತತವಾಗಿ ಮೂರನೇ ಭಾರಿಗೆ ಅವಿರೋಧವಾಗಿ ಸರ್ವಾನುಮತದಿಂದ ಆಯ್ಕೆಯಾಗಿರುವುದನ್ನು ಅಭಿನಂದಿಸುತ್ತೇನೆ. 2ನೇ ಸೆಪ್ಟೆಂಬರ್ 1962 ಈ ಸುದಿನದಂದು ಶ್ರೀ ಆರ್.ಕೆ.ಪರ್ವತರಾಜ ಗುಪ್ತ ಹಾಗೂ ಶ್ರೀ ಆರ್.ಪಿ.ಸತ್ಯವತಿಯವರ ದಂಪತಿಗಳ ಸುಪುತ್ರರಾಗಿ ಜನಿಸಿ ತಮ್ಮ ಬಾಲ್ಯದಿಂದಲೇ ಸಮಾಜಸೇವೆಗೆ ಕಂಕಣಬದ್ದರಾದ ಇವರಿಂದ ಸಮಾಜದ ಸರ್ವಾಂಗೀಣ ಅಭಿವೃದ್ಧಿ ಸಾದ್ಯವಾಗುವುದೆಂದು ಜನತೆಯ ವಿಶ್ವಾಸವನ್ನು ಹೊಂದಿರುತ್ತಾರೆ**

**ಬಾ**ಲ್ಯದಿಂದಲೇ ಉತ್ತಮ ನಾಯಕತ್ವ ಮತ್ತು ಸಂಘಟನಾ ಶಕ್ತಿಯನ್ನು ಮೈಗೂಡಿಸಿಕೊಂಡಿದ್ದು, ವಿದ್ಯಾರ್ಥಿ ದೆಸೆಯಿಂದಲೇ ಸಾಮಾಜಿಕ ಕಳಕಳಿಯೊಂದಿಗೆ ಹಲವಾರು ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಜೊತೆಗೆ ಕವನ, ಚುಟುಕು ಬರೆಯುವ ಹವ್ಯಾಸದೊಂದಿಗೆ ನಾಟಕಗಳನ್ನು ಬರೆದು ನಿರ್ದೇಶನ ಮಾಡಿ ಪಾತ್ರದಾರಿಯೂ ಆಗಿ ಸಾಮಾಜಿಕ ಜಾಗೃತಿ ಮೂಡಿಸುತ್ತಿದ್ದರು. ಸನ್ಮಾನ್ಯ ಆರ್.ಪಿ.ರವಿಶಂಕರ್ ರವರಿಗೆ ವಿದ್ಯಾರ್ಥಿಯಾಗಿದ್ದಾಗಲೇ ರೋಲರ್ ಸ್ಕೇಟಿಂಗ್ ನಲ್ಲಿ ವಿಶೇಷ ಆಸಕ್ತಿ ಮೂಡಿ ತಾನು ಕಲಿಯುವುದರ ಜೊತೆಗೆ ನೂರಾರು ಮಕ್ಕಳಿಗೆ ಸ್ಕೇಟಿಂಗ್ ಕಲಿಸುವ ಜೊತೆಗೆ 42 ಗಂಟೆಗಳ ನಿರಂತರ ತಡೆರಹಿತ ರೋಲರ್ ಸ್ಕೇಟಿಂಗ್, ಬೆಂಗಳೂರು–ಕೊಲಂಬೋ ಸ್ಕೇಟಿಂಗ್ ಪ್ರಯಾಣ ಹಾಗೂ ವಿಶ್ವವಿಖ್ಯಾತ ಶ್ರೀ ತಿರುಪತಿ ಬೆಟ್ಟವನ್ನು ಸ್ಕೇಟಿಂಗ್ ಮೂಲಕ ಹತ್ತಿ ಇಳಿಯುವ ಮೂಲಕ ರಾಷ್ಟ್ರೀಯ ದಾಖಲೆ ಹಾಗೂ ಬೆಂಗಳೂರು–ಮಲೇಷಿಯಾ–ಸಿಂಗಪುರ್–ಬೆಂಗಳೂರು ಸ್ಕೇಟಿಂಗ್ ನಲ್ಲಿ 5600 ಕಿಮೀ ಪ್ರಯಾಣದ ಮೂಲಕ ಅಂತರಾಷ್ಟ್ರೀಯ ದಾಖಲೆಯನ್ನು ನಿರ್ಮಿಸಿದ್ದಾರೆ.



ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭೆಯ ಅಧ್ಯಕ್ಷರಾಗುವ ಮೂಲಕ ಇಡೀ ರಾಜ್ಯದ ಮೂಲೆ ಮೂಲೆಗಳನ್ನು ಸಂಚರಿಸಿ ನಾಡಿನ ಆರ್ಯವೈಶ್ಯ ಯುವಜನಾಂಗವನ್ನು ಸಂಘಟಿಸಿದ್ದರು. ಬಡತನ ನಿರ್ಮೂಲನೆಯೊಂದಿಗೆ ಕೆಳ ಮತ್ತು ಮಧ್ಯಮ ವರ್ಗದವರನ್ನು ಮೇಲೆತ್ತುವ ಮೂಲಕ ಸ್ವಾವಲಂಭೀ ಸಮಾಜವನ್ನು ನಿರ್ಮಿಸುವ ದೃಢ ಸಂಕಲ್ಪದೊಂದಿಗೆ ಇವರು ನಿರ್ಮಿಸಿದ ವಾಸವಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯು ಇಂದು ಕರ್ನಾಟಕ ರಾಜ್ಯದ ಸಹಕಾರ ಸಂಘಗಳ ಸಾಲಿನಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದೆ. ಕಳೆದ ನಾಲ್ಕು ದಶಕಗಳಿಂದಲೂ ಸಂಘ–ಪರಿವಾರದ ಹಿನ್ನೆಲೆ ಹಾಗೂ ಪ್ರೇರಣೆಯಿಂದ ಸತತವಾಗಿ ಆರ್ಯವೈಶ್ಯ ಸಮಾಜವಷ್ಟೇ ಅಲ್ಲದೇ, ಸಮಾಜದ ಹಲವಾರು ಸಂಘ–ಸಂಸ್ಥೆಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಇಡೀ ಸಮಾಜದ ಸವಾಂಗೀಣ ಅಭಿವೃದ್ಧಿಗಾಗಿ ಅಹರ್ನಿಶಿ ದುಡಿಯುತ್ತಿದ್ದಾರೆ. ಕೋವಿಡ್–19 ಸಂದರ್ಭದಲ್ಲಿ ಸುಮಾರು 6 ಕೋಟಿ ರೂಪಾಯಿಗಳ ಮೊತ್ತದ ಸಹಾಯ ಸೌಲಭ್ಯ ಹಾಗೂ ಆಹಾರ ಧಾನ್ಯಗಳ ಕಿಟ್‌ಗಳನ್ನು ಸಾಮಾನ್ಯ ಜನಸಾಮಾನ್ಯರಿಗೆ ವಿತರಿಸಲಾಗಿದೆ. ಸ್ವತ: 76 ಭಾರಿ ರಕ್ತದಾನ ಮಾಡಿದ್ದ ಇವರು ಕೋವಿಡ್ ಸಂದರ್ಭದಲ್ಲಿ ಸಮಾಜಕ್ಕೆ ತುರ್ತು ರಕ್ತದ ಅನಿವಾರ್ಯತೆಯನ್ನು ಮನಗೊಂಡು ರಕ್ತದಾನ ಶಿಬಿರಗಳನ್ನು ಆಯೋಜಿಸುವ ಮೂಲಕ 6000ಕ್ಕಿಂತಲೂ ಹೆಚ್ಚಿನ ಯೂನಿಟ್ ರಕ್ತದಾನ ಮಾಡಿಸಿದ್ದಾರೆ. ವಿಶೇಷವಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಬಿರುಮಳೆಯಿಂದ ಪ್ರವಾಹ ಉಂಟಾದ ಸಂದರ್ಭದಲ್ಲಿ ಪ್ರವಾಹ ಪೀಡಿತ ಸಂತ್ರಸ್ಥರಿಗೆ ಅಪಾರವಾದ ಆರ್ಥಿಕ ಸಹಕಾರವನ್ನು ನೀಡುವ ಮೂಲಕ ಸಹಾಯ ಹಸ್ತವನ್ನು ನೀಡಿದ್ದಾರೆ. ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಸಂಕಷ್ಟದಲ್ಲಿ ಸಿಲುಕಿದ ಕುಟುಂಬಗಳಿಗೆ ನಾನಾ ರೀತಿಯ ಸಹಾಯವನ್ನು ಕಾಲಕಾಲಕ್ಕೆ ನೀಡುವ ಮೂಲಕ ನೂರಾರು ಕುಟುಂಬಗಳ: ಪುನರುಜ್ಜೀವನಕ್ಕೆ ಕಾರಣಕರ್ತರಾಗಿರುತ್ತಾರೆ.



ಮನೆ ಮನೆಗೂ ಮಹಾಸಭೆ ಎಂಬ ಸಂಕಲ್ಪ ರಥಯಾತ್ರೆಯ ಮೂಲಕ ಕಾರ್ಯಚಟುವಟಿಕೆಗಳನ್ನು ಆರಂಬಿಸಿ ರಾಜ್ಯದ ಮೂಲೆ ಮೂಲೆಯಲ್ಲಿರುವ ಆರ್ಯವೈಶ್ಯ ಬಂಧುಗಳನ್ನು ಸಂಘಟಿಸಿ ತಮ್ಮ ಸಂಘಟನಾ ಕೌಶಲ್ಯವನ್ನು ಪ್ರದರ್ಶಿಸಿದ್ದೇ ಅಲ್ಲದೇ 2010ರಲ್ಲಿ ನಡೆಸಿದ ಶತಮಾನೋತ್ಸವ ಕಾರ್ಯಕ್ರಮದ ಮೂಲಕ ಈ ರಾಜ್ಯಕ್ಕೆ ಆರ್ಯವೈಶ್ಯ ಬಂಧುಗಳ ಶಕ್ತಿಯನ್ನು ಪ್ರದರ್ಶಿಸಿ ಧೀಮಂತ ನಾಯಕರಾಗಿ ಬೆಳೆದು ಬಂದರು. ಇವರ ಅವಧಿಯಲ್ಲಿ ಮಹಾಸಭೆ ಆರ್ಥಿಕವಾಗಿ ಬೆಳೆದಿದೆ. ಸಂಘಟಿತವಾಗಿ ಸಂಘಟನೆಯಲ್ಲಿ ಸದೃಡವಾಗಿದೆರ. ಸೇವಾ ಕ್ಷೇತ್ರದಲ್ಲಿ ದಾಪುಗಾಲು ಹಾಕಿದೆ. ನಮ್ಮೆಲ್ಲರ ಸುಧೈವವೆಂಬಂತೆ, ಸನ್ಮಾನ್ಯ ಆರ್.ಪಿ.ರವಿಶಂಕರ್‌ರವರು ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಅಧ್ಯಕ್ಷರಾಗಿ ಪುನರಾಯ್ಕೆಯಾಗಿರುವುದು ಇಡೀ ನಾಡಿಗೆ ಸಂತಸ ತಂದಿದೆ. ಈಗಾಗಲೇ ಇವರ ಘನ ಅಧ್ಯಕ್ಷತೆಯಲ್ಲಿ ಕರ್ನಾಟಕ ಆರ್ಯವೈಶ್ಯ ಮಹಾಸಭೆಯು ಅಬಾಲವೃದ್ಧರಾದಿಯಾಗಿ ಸರ್ವರ ಶ್ರೇಯಸ್ಸಿಗಾಗಿ ಶ್ರಮಿಸಿ ಪ್ರಗತಿಯ ಪಥದಲ್ಲಿ ನಡೆಯುತ್ತಿದ್ದು, ಇದರ ಹತ್ತುಪಟ್ಟು ಕನಸಿನ ಯೋಜನೆಗಳನ್ನು ಈಗಾಗಲೇ ಸಿದ್ಧಪಡಿಸಿರುವುದು ಅವರ ದೂರದೃಷ್ಟಿ ಚಿಂತನೆಗೆ ಸಾಕ್ಷಿಯಾಗಿದೆ. ಇಂದು ಶ್ರೀಯುತರ ಅಧ್ಯಕ್ಷತೆಯಲ್ಲಿ ನಮ್ಮ ಮಾತೃಸಂಸ್ಥೆ ಕರ್ನಾಟಕ' ಮಹಾಸಭೆಯು ಮಹತ್ತರ ಕಾರ್ಯಗಳನ್ನು ಮಾಡುತ್ತಿದ್ದು, ಬೆಂಗಳೂರು, ಮೈಸೂರು, ಹಾಸನ ಜಿಲ್ಲೆಯ ಅರಕಲಗೂಡು, ದಾವಣಗೆರೆ, ದಾಬಸ್ ಪೇಟೆ ಹಾಗೂ ಇನ್ನೂ ಮುಂತಾದ ಕಡೆಗಳಲ್ಲಿ ಮಹಾಸಭೆಗೆ ಅಪಾರ ಮೌಲ್ಯದ ಆಸ್ತಿಗಳನ್ನು ಮಾಡಲಾಗಿದೆ. ಈ ನಿಟ್ಟಿನಲ್ಲಿ ಇಂದು ಹಿಂದೆಂದೂ ಕಂಡರಿಯದ ರೀತಿಯಲ್ಲಿ ಶರವೇಗದಲ್ಲಿ ಮಹಾಸಭೆಯ ಅಭಿವೃದ್ಧಿಯ ಕಾರ್ಯಗಳು ನಡೆಯುತ್ತಿರುವುದು ನಮ್ಮ ಸೌಭಾಗ್ಯವೇ ಸರಿ. ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಅಧ್ಯಕ್ಷರಾದ ಸನ್ಮಾನ್ಯ ಆರ್.ಪಿ. ರವಿಶಂಕರ್ ರವರ ನಾಯಕತ್ವದಲ್ಲಿ ಯೋಜಿಸಿರುವ ಮುಂದಿನ ಎಲ್ಲಾ ಮಹತ್ತರ ಅಭಿವೃದ್ಧಿ ಕಾರ್ಯಗಳಿಗೆ ಇಡೀ ರಾಜ್ಯದ ಸಮಸ್ತ ಆರ್ಯವೈಶ್ಯ ಬಂಧುಗಳು ಸಂಪೂರ್ಣ ಸಹಕಾರವನ್ನು ನೀಡುವ ಸಂಕಲ್ಪವನ್ನು ತೊಡೋಣ.



## ಶ್ರೀಯುತರು ಕಾರ್ಯನಿರ್ವಹಿಸುತ್ತಿರುವ ಇತರ ಸಂಘ–ಸಂಸ್ಥೆಗಳೆಂದರೇ

ಕರ್ನಾಟಕ ಆರ್ಯವೈಶ್ಯ ಮಹಾಸಭೆ, ಆಲ್ ಇಂಡಿಯಾ ಫೆಡರೇಷನ್ ಆಫ್ ಆರ್ಯವೈಶ್ಯ ಮಹಾಸಭ, ವಾಸವಿ ಕ್ರೆಡಿಟ್ ಕೋ–ಆಪರೇಟೀವ್ ಸೊಸೈಟಿ ನಿಯಮಿತ, ಸಂಸ್ಕಾರ ಭಾರತಿ (ಬೆಂಗಳೂರು ಮಹಾನಗರ), ಮಲ್ಲೇಶ್ವರಂ ಕಮರ್ಷಿಯಲ್ ಫೋರಂ, ವಿಶ್ವ ಹಿಂದೂ ಪರಿಷತ್ ಮಲ್ಲೇಶ್ವರಂನ ಅಧ್ಯಕ್ಷರಾಗಿ, ಮೈಸೂರು ಸಿಲ್ಕ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕಿನ ಉಪಾಧ್ಯಕ್ಷರಾಗಿ, ಬೆಂಗಳೂರಿನ ಶ್ರೀ ವಾಸವಿ ವಿದ್ಯಾಪೀಠ, ಮಲ್ಲೇಶ್ವರಂ ಆರ್ಯವೈಶ್ಯ ಸಂಘ, ವಾಸವಿ ವೈಧಿಕ ಭವನ, ವಾಸವಿ ವೇದನಿಧಿ ಟ್ರಸ್ಟಿನ ಕಾರ್ಯದರ್ಶಿಗಳಾಗಿ, ಅಖಿಲ ಭಾರತ ಶ್ರೀ ವಾಸವಿ ಪೆನುಗೊಂಡ ಟ್ರಸ್ಟಿನ ಪ್ರಚಾರ ಸಮಿತಿಯ ಛೇರ್ಮನ್ನರಾಗಿ, ಇಸ್ಕಾನ್ ಸಂಸ್ಥೆಯ ಧರ್ಮಾಧಿಕಾರಿಯಾಗಿ ಇನ್ನೂ ಹತ್ತು ಹಲವು ಪ್ರತಿಷ್ಠಿತ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಶ್ರೀಯುತರ ಕಾರ್ಯಕ್ಷಮತೆಯನ್ನು ಮೆಚ್ಚಿ ದೇಶ–ವಿದೇಶಗಳಲ್ಲಿ ಹಾಗೂ ರಾಜ್ಯ ಸರ್ಕಾರಗಳು ಮತ್ತು ಹಲವಾರು ಸೇವಾ ಸಂಸ್ಥೆಗಳು ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ



ಇಂತೀ ನಿಮ್ಮ,
**ಡಾ. ಅಜಯ್ ಕುಮಾರ್ ಎಂ.ವಿ.**
ಕರ್ನಾಟಕ ಆರ್ಯವೈಶ್ಯ ಮಹಾಸಭೆ
ಯುವ ಪರಿಷತ್, ಬೆಂಗಳೂರು

# ಕರ್ನಾಟಕ ಆರ್ಯವೈಶ್ಯ ಮಹಾಸಭಾ

ನಂ.16, ಶೇಷಾದ್ರಿ ರಸ್ತೆ, ಗಾಂಧೀನಗರ, ಬೆಂಗಳೂರು-560009



## 2022-2027ರ ಜಿಲ್ಲಾವಾರು ಕಾರ್ಯಕಾರಿ ಸಮಿತಿ

### ಬೆಂಗಳೂರು ನಗರ



**ಕೃಷ್ಣ ಕೆ.ಆರ್**
ಮಹಾಲಕ್ಷ್ಮೀ ಲೇಔಟ್
ಮೊ. 9844025991



**ಆದಿನಾರಾಯಣ ಪ್ರಸಾದ್ ಪಿ.ಎಸ್**
ಮಲ್ಲೇಶ್ವರಂ
ಮೊ. 9448066204



**ಉದಯ್ ಕುಮಾರ್ ಎಂ.ಎಲ್**
ಬಿ.ಎಸ್.ಕೆ 2ನೇ ಹಂತ
ಮೊ. : 9844067956



**ಉಮಾ ಸಾಯಿರಾಂ**
ಕಮರ್ಷಿಯಲ್ ಸ್ಟ್ರೀಟ್
ಮೊ. 8722381194



**ನಾಗೇಶ್ ಬಾಬು ಪಿ**
ಜಯನಗರ
ಮೊ. 9845015030



**ತಾರ ಕೆ.ಹೆಚ್**
ಮಲ್ಲೇಶ್ವರಂ
ಮೊ. 9141181141



**ಪೋತನ್ನ ಸೆಟ್ಟಿ ಕೆ.**
ಬನ್ನೇರುಘಟ್ಟ ರಸ್ತೆ
ಮೊ. 9972367242



**ಜಯಣ್ಣ ಕೆ**
ಪದ್ಮನಾಭನಗರ
ಮೊ. 9886784689



**ಯುವರಾಜ್ ಎಂ**
ಶ್ರೀನಗರ
ಮೊ. 9341213508



**ಶಭರೀಶ್ ಎಸ್.ಎನ್.**
ಬಸವೇಶ್ವರನಗರ
ಮೊ. 9036617178



**ರಮೇಶ್ ಬಾಬು ಡಿ**
ಇಂದಿರಾನಗರ
ಮೊ. 9448060429



**ವೆಂಕಟೇಶಯ್ಯ ಶೆಟ್ಟಿ ಎ.**
ಜಯನಗರ
ಮೊ. 9845033143



**ಶಾಂತರಾಂ ಬಿ.ಆರ್.**
ರಾಜಾಜಿನಗರ
ಮೊ. 9448915431



**ಶ್ರೀನಿವಾಸ ಮೂರ್ತಿ ಎನ್.ಎಸ್**
ಮಾಮೂಲ್ ಪೇಟೆ
ಮೊ. 9845010375



**ರಾಜೇಂದ್ರ ಗುಪ್ತ ಜಿ.ಬಿ.**
ಹೇರೋಹಳ್ಳಿ
ಮೊ. 9844052932



**ವೆಂಕಟೇಶ್ ವಿ**
ಕೆ.ಆರ್ ಪುರಂ
ಮೊ. 9372955885



**ವಿಶ್ವನಾಥ ಶೆಟ್ಟಿ ಎನ್.ವಿ.**
ಉತ್ತರಹಳ್ಳಿ
ಮೊ. 9663870865



**ಸುಬ್ರಮಣ್ಯ ವಿ.ಆರ್**
ಜೆ.ಪಿ ನಗರ
ಮೊ. 8073079919

### ಬೆಂಗಳೂರು ಗ್ರಾಮಾಂತರ



**ಅಮರ್ ನಾಥ್ ಎಸ್ ಎಸ್**
ದೊಡ್ಡಬಳ್ಳಾಪುರ
ಮೊ. 9845922685



**ಅನಿಲ್‌ಕುಮಾರ್ ಆರ್ ಎಸ್**
ನೆಲಮಂಗಲ
ಮೊ. 9945559424

## ಹಾಸನ



**ರವಿ ಕುಮಾರ್ ಎ ಆರ್**
ಹೊಳೆನರಸೀಪುರ
ಮೊ. 9448001494



**ಪಾರ್ಥಸಾರಥಿ ಕೆ.ಜಿ**
ಅರಸಿಕೆರೆ
ಮೊ. 9591826661

## ಚಾಮರಾಜನಗರ



**ನಾಗರಾಜ ಬಾಬು ಕೆ.ಎಸ್**
ಕೊಳ್ಳೇಗಾಲ
ಮೊ. 9448184683



**ಜಯಪ್ರಕಾಶ್ ವಿ**
ಹನೂರು
ಮೊ. 9448938806

## ಬಳ್ಳಾರಿ



**ಹನುಮಂತಯ್ಯ ಶೆಟ್ಟಿ ಹೆಚ್ ಜೆ**
ಸಿರಗುಪ್ಪ
ಮೊ. 9448121023



**ನಾಮಾ ನಾಗರಾಜ್**
ಬಳ್ಳಾರಿ
ಮೊ. 9448262708



**ರಾಜಾರಾವ್ ಶ್ರೇಷ್ಠಿ ಜಿ**
ಕಂಪ್ಲಿ
ಮೊ. 9986883432



**ಜಯಂತಿ ಕಿಶೋರ್ ಕುಮಾರ್**
ಬಳ್ಳಾರಿ
ಮೊ. 9448006746



**ಶ್ರೀಧರ್ ಜೆ**
ಬಳ್ಳಾರಿ
ಮೊ. 9986072526

## ಬೀದರ್



**ದತ್ತಾತ್ರೇಯ ಸಿಂಧೋಲ್**
ಬೀದರ್
ಮೊ. 9448115441



**ಚಂದ್ರಶೇಖರ ಗಾದ**
ಬೀದರ್
ಮೊ. 9341111766

## ಬಾಗಲಕೋಟೆ



**ಸತ್ಯನಾರಾಯಣ ವಿ ಹೇಮಾದ್ರಿ**
ಬಾಗಲಕೋಟೆ
ಮೊ. 9845122451



**ಶ್ರೀಪಾದ ಎನ್ ಗುಂಡಾ**
ಮುದೋಳ
ಮೊ. 9448139457

## ಚಿಕ್ಕಬಳ್ಳಾಪುರ



**ಅಮರ್‌ನಾಥ್ ಗುಪ್ತ ಜಿ ಎನ್**
ಚಿಂತಾಮಣಿ
ಮೊ. 9448342206



**ರಾಮಮೋಹನ್ ಎಂ ಎಸ್**
ಗೌರಿಬಿದನೂರು
ಮೊ. 9448249444



**ರಮೇಶ್ ಬಾಬು ಎಸ್**
ಶಿಡ್ಲಘಟ್ಟ
ಮೊ. 984512384



**ಸುಬ್ಬರಾಯ ಶೆಟ್ಟಿ ಜಿ**
ಬಾಗೇಪಲ್ಲಿ
ಮೊ. 9110827055

## ಚಿತ್ರದುರ್ಗ



**ಅಮರೇಶ ಕೆ ವಿ**
ಹಿರಿಯೂರು
ಮೊ. 9845565179



**ಪ್ರಸಾದ್ ಶ್ರೀನಿವಾಸ್ ಸಿ ಎಸ್**
ಚಳ್ಳಕೆರೆ
ಮೊ. 9845283028



**ಲವಕುಮಾರ್ ಬಿ ವಿ**
ಹೊಸದುರ್ಗ
ಮೊ. 9448155132



**ವೆಂಕಟೇಶ್ ಕುಮಾರ್ ಎಲ್ ಆರ್**
ಚಿತ್ರದುರ್ಗ
ಮೊ. 7019479965

## ದಾವಣಗೆರೆ



ಪ್ರಭಾಕರ್ ಆರ್ ಎಲ್
ದಾವಣಗೆರೆ
ಮೊ. 9448045683



ಶ್ರೀನಿವಾಸಮೂರ್ತಿ ಆರ್. ಬಿ
ಚಿತ್ರದುರ್ಗ
ಮೊ. 8884099999



ಅಶ್ವತ್ಥ್ ರಾಜ್ ಬಿ ಬಿ
ದಾವಣಗೆರೆ
ಮೊ. 9880639718



ಮಂಜುನಾಥ್ ಪಿ ಗುಂಡಾಲ್
ದಾವಣಗೆರೆ
ಮೊ. 9448270633

## ಧಾರವಾಡ



ಶಿವಾನಂದ ಕಂಪ್ಲಿ
ಹುಬ್ಬಳ್ಳಿ
ಮೊ. 9845274515



ಅರುಣೋದಯ ಹೆಬಸೂರು
ನವಲಗುಂದ
ಮೊ. 9448867644

## ಕಲ್ಬುರ್ಗಿ



ದತ್ತಾತ್ರೇಯ ಐನಾಪುರ
ಸೇಡಂ
ಮೊ. 9448251933



ವೀರೇಶ್ ಎಸ್ ವಾಗನಗೇರಿ
ಕಲ್ಬುರ್ಗಿ
ಮೊ. 9980566085

## ಹಾವೇರಿ



ಪ್ರಶಾಂತ್ ಗುತ್ತಲ್
ಹಿರೇಕೆರೂರು
ಮೊ. 9880852972



ಸುರೇಶ್ ಎನ್ ವೈಶ್ಯರ್
ಹಿರೇಕೆರೂರು
ಮೊ. 9448371306

## ಚಿಕ್ಕಮಗಳೂರು



ವಾಸುದೇವಮೂರ್ತಿ ಎಸ್ ಎ
ಚಿಕ್ಕಮಗಳೂರು
ಮೊ. 9448396890



ಅಮರನಾಥ್ ಕೆ ಎ
ಕಡೂರು
ಮೊ. 9448340972

## ಕೋಲಾರ



ಸತೀಶ್ ಎನ್ ಸಿ
ಕೋಲಾರ
ಮೊ. 9448003745



ಅನಿಲ್ ಕುಮಾರ್ ಎಂ.ಪಿ
ಮುಳಬಾಗಿಲು
ಮೊ. 9845599885



ಅಮರನಾಥ್ ಎಸ್ ಆರ್
ಶ್ರೀನಿವಾಸಪುರ
ಮೊ. 9448674129



ರಮೇಶ್ ವೈ ವಿ
ಬಂಗಾರಪೇಟೆ
ಮೊ. 9448313008

## ಕೊಪ್ಪಳ



ರಾಘವೇಂದ್ರ ಶೆಟ್ಟಿ .ಬಿ
ಕಾರಟಗಿ
ಮೊ. 7349037432



ಕೆಲೋಜಿ ಸಂತೋಷ್
ಗಂಗಾವತಿ
ಮೊ. 9844057944



ನಾರಾಯಣ ಡಿ ಕುರುಗೋಡ
ಕೊಪ್ಪಳ
ಮೊ. 9972769743

## ಮೈಸೂರು


**ಸುರೇಶ್ ಹೆಚ್ ವಿ**
ನಂಜನಗೂಡು
ಮೊ. 9742716063


**ಅನಂತ ಇ.ಕೆ**
ವಿಶ್ವೇಶ್ವರನಗರ
ಮೊ. 9886343896


**ಗೌರವ್ ಸುಧಾ ಮುರಳಿ**
ಗೋಕುಲಂ 3ನೇ ಹಂತ
ಮೊ. 9900600151

## ರಾಯಚೂರು


**ಕುಂಟ್ನಾಳ್ ವೆಂಕಟೇಶ್**
ವಾಸವಿ ನಗರ
ಮೊ. 9880728777


**ಬಲಿಕಂರಿ ಜಗದೀಶ್ ಗುಪ್ತ**
ರಾಯಚೂರು
ಮೊ. 9844042793


**ಮುತ್ತುರಾಜ್ ಆರ್**
ಮಾನ್ವಿ
ಮೊ. 9845688088


**ಗಿರಿಧರ್ ಶೆಟ್ಟಿ**
ತಲಮಾರಿ
ಮೊ. 9008133316


**ರಾಘವೇಂದ್ರ ಸುರಪುರ**
ಮುಧೋಳ
ಮೊ. 9448909443


**ವಾಸುದೇವ ಡಿ**
ತಿಮ್ಮಾಪುರಪೇಟೆ
ಮೊ. 9448570220

## ರಾಮನಗರ


**ಪ್ರಸನ್ನಕುಮಾರ್ ಕೆ ವಿ**
ಮಂಡಿಪೇಟೆ
ಮೊ. 9448516963


**ಗೋಪಾಲ ಬಿ ಎಸ್**
ಮಾಗಡಿ
ಮೊ. 9448292124

## ಶಿವಮೊಗ್ಗ


**ಶೇಷಾಚಲ ಎಸ್ ಕೆ**
ಕೋಟೆ ರಸ್ತೆ
ಮೊ. 9448131575


**ಮಂಜುನಾಥ್ ಎಂ ಜೆ**
ತಿಲಕ್‌ನಗರ
ಮೊ. 9448133559

## ತುಮಕೂರು


**ನಟರಾಜ ಬಿ ಎಸ್**
ತಿಪಟೂರು
ಮೊ. 9986413653


**ರಾಮಚಂದ್ರ ಗುಪ್ತ ಎಸ್ ಕೆ**
ಶಿರಾ
ಮೊ. 8310778873


**ಮೋಹನ್ ಡಿ ಎ**
ಶಂಕರಪುರಂ
ಮೊ. 9480343858


**ಸಂಪಂಗಿ ಕೃಷ್ಣಯ್ಯ ಶೆಟ್ಟಿ ಸಿ ಎ**
ಕೊರಟಗೆರೆ
ಮೊ. 9916550660


**ಶ್ರೀನಿವಾಸ ಕೆ ವಿ**
ಪಾವಗಡ
ಮೊ. 9448213572

## ಯಾದಗಿರಿ


**ರಾಘವೇಂದ್ರ ಬಾದಂ**
ಸೈದಾಪುರ
ಮೊ. 9743486100


**ಶ್ರೀನಿವಾಸ ಓಬಳಶೆಟ್ಟಿ**
ಯಾದಗಿರಿ
ಮೊ. 9900130574

## ವಿಜಯನಗರ


**ಆನಂದ ಬಾಬು ಬಿ ಎಸ್**
ಕೂಡ್ಲಗಿ
ಮೊ. 9448524457


**ಸೋಮಶೇಖರ್ ವೈ**
ಹೊಸಪೇಟೆ
ಮೊ. 9448262542

# ಕರ್ನಾಟಕ ಆರ್ಯವೈಶ್ಯ ಮಹಾಸಭಾ

**ಬಂಧುಗಳೇ, 1908ರಲ್ಲಿ ನಮ್ಮ ಪೂರ್ವಿಕರ ಶ್ರಮದಿಂದ ಸ್ಥಾಪಿಸಲ್ಪಟ್ಟ ಕರ್ನಾಟಕ ಆರ್ಯವೈಶ್ಯ ಮಹಾಸಭೆ, 1987 ರ ನಂತರ ಆಡಳಿತ ನಿರ್ವಹಣೆಗಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಗಳನ್ನು ನಡೆಸಲು ಪ್ರಾರಂಭಿಸಿತು. 1987, 1991, 1999, 2004, 2009, 2016, ರ ನಂತರ 2022 ಮೇ 1 ರಂದು ನಡೆದ ಚುನಾವಣೆಗಳು, ಇಂದಿಗೆ ಇತಿಹಾಸ.**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಿಗದಿತ ಅವಧಿ ಪೂರ್ಣವಾಗುತ್ತಲೇ ಸಂಘಗಳ ಆಡಳಿತಕ್ಕಾಗಿ ಚುನಾವಣೆಗಳನ್ನು ನಡೆಸುವುದು ಅವಶ್ಯವಾಗಿರುತ್ತದೆ ಆದರೆ ವಿಶ್ವವನ್ನು ಕಾಡಿದ ಕರೋನ ಸೋಂಕಿನಿಂದ ಸರ್ಕಾರದ ವಿಶೇಷ ಆದೇಶಗಳನ್ವಯ ಎರಡುಬಾರಿ ಮುಂದೂಡಲ್ಪಟ್ಟು, ಚುನಾವಣೆಗಳನ್ನು ಅಂತಿಮವಾಗಿ ದಿನಾಂಕ 1–5–2022 ಭಾನುವಾರದಂದು ನಡೆಸಲು ಕಾರ್ಯಕಾರಿ ಸಮಿತಿ ನಿಶ್ಚಯಿಸಿತು.

## ಮಹಾಸಭಾ ಚುನಾವಣೆಗಳು ಹೇಗೆ ನಡೆಯಿತು, ನಿಮಗೆ ತಿಳಿದಿರಲಿ

**ದಿನಾಂಕ 7–4–2022ರ ಮಹಾಸಭೆಯ ವಾರ್ತಾಪತ್ರದ ಮೂಲಕ ಚುನಾವಣೆಯ ವೇಳಾಪಟ್ಟಿಯನ್ನು ಅಧಿಕೃತವಾಗಿ ಘೋಷಿಸಲಾಯಿತು.ಮಹಾಸಭೆಯ ಉಪನಿಯಮಗಳಂತೆ ಮಹಾಸಭೆ ಚುನಾವಣೆಗೆ 60 ದಿನಗಳ ಮೊದಲೇ ಮಹಾಸಭೆಯ ಅಧಿಕೃತ ವೆಬ್‌ಸೈಟ್ ಮೂಲಕ ಸದಸ್ಯರ ಪಟ್ಟಿಯನ್ನು ಬಹಿರಂಗವಾಗಿ ತಿಳಿಸಿ, ಆಕ್ಷೇಪಣೆಗಳು, ವಿಳಾಸ ಬದಲಾವಣೆ ಇತ್ಯಾದಿಗಳ ಬಗ್ಗೆ ಏನಾದರೂ ಬದಲಾವಣೆಗಳನ್ನು ಮಾಡಿಸಿಕೊಳ್ಳಲು ಅವಕಾಶ ನೀಡಲಾಗಿತ್ತು. ಈ ಸಂದರ್ಭದಲ್ಲಿ ಸರಿ ಸುಮಾರು 900ಕ್ಕೂ ಮೀರಿದ ಸದಸ್ಯರು ಅವಶ್ಯ ಮಾಹಿತಿಗಳನ್ನು ನೀಡಿತಮ್ಮ ಹೆಸರಿನಲ್ಲಿರುವ ದೋಷ, ವಿಳಾಸ ಬದಲಾವಣೆಗಳನ್ನು ಮಾಡಿಕೊಂಡರು, ದಿನಾಂಕ: 18.04.2022 ರಂದು ಅರ್ಹ ಸದಸ್ಯರ ಪಟ್ಟಿಯನ್ನು ವೆಬ್‌ಸೈಟ್ ಮೂಲಕವೇ ಸದಸ್ಯರ ಮನೆ ಬಾಗಿಲಿಗೆ ಮಾಹಿತಿ ನೀಡಲಾಯಿತು.**

ಮಹಾಸಭೆಯ ಉಪನಿಯಮಗಳನ್ವಯ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಇದ್ದ ಅಧಿಕಾರವನ್ನು ಚಲಾಯಿಸಿ ಶ್ರೀ ಪವನ್‌ಕುಮಾರ್, ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ ಇವರನ್ನು ಮುಖ್ಯ ಚುನಾವಣಾಧಿಕಾರಿಗಳಾಗಿ ನೇಮಿಸಲಾಯಿತ್ತು. ಅಂತೆಯೇ ಮಾನ್ಯ ಸಹಕಾರ ಇಲಾಖೆಯಿಂದ ಅನುಮತಿ ಪಡೆದು ದಿನಾಂಕ 5–4–2022 ರಂದು ಮುಂದಿನ ಐದು ವರ್ಷಗಳ ಅವಧಿಗೆ ಕಾರ್ಯಕಾರಿ ಸಮಿತಿಗೆ ಮತ್ತು ಅಧ್ಯಕ್ಷರ ನೇರ ಚುನಾವಣೆಗೆ ಅಧಿಸೂಚನೆ ಹೊರಡಿಸಿ, ಚುನಾವಣಾ ವೇಳಾಪಟ್ಟಿಯನ್ನು ಮಹಾಸಭೆ ವಾರ್ತಾಪತ್ರ ಹಾಗೂ ಮಹಾಸಭೆ ಅಧಿಕೃತ ವೆಬ್‌ಸೈಟ್ ಮೂಲಕ ಸದಸ್ಯರಿಗೆ ತಿಳಿಸಲಾಯಿತು.

ಮಹಾಸಭೆ ಉಪನಿಯಮಗಳ ರೀತ್ಯಾ ಆಯಾ ಜಿಲ್ಲೆಯಲ್ಲೆಯೇ ಮಹಾಸಭೆ ಹೊಂದಿರುವ ಸದಸ್ಯರ ಸಂಖ್ಯೆಗೆ ಅನುಗುಣವಾಗಿ 23 ಜಿಲ್ಲೆಗಳಿಂದ 82 ಕಾರ್ಯಕಾರಿ ಸಮಿತಿ ಸದಸ್ಯರನ್ನು ಚುನಾಯಿಸಲು ಚುನಾವಣೆ ಅಧಿಸೂಚನೆಯಲ್ಲಿ ವಿವರಗಳನ್ನು ನೀಡಲಾಗಿತ್ತು. ಅದರಂತೆ ದಿನಾಂಕ 11–4–2022 ರಿಂದ 18–4–2022ರ ವರೆವಿಗೂ ನಡೆದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆಯಲ್ಲಿ 23 ಜಿಲ್ಲೆಗಳಿಂದ 174 ನಾಮಪತ್ರಗಳು ಸ್ವೀಕೃತವಾಗಿದ್ದವು.

ದಿನಾಂಕ 21–4–2022 ರಂದು ನಡೆದ ನಾಮಪತ್ರ ಪರಿಶೀಲನೆ ಪ್ರಕ್ರಿಯೆಯಲ್ಲಿ 9 ನಾಮಪತ್ರಗಳು ಅನೂರ್ಜಿತವಾದವು. ಅವುಗಳ ಪೈಕಿ ಸತತ ಎರಡನೇ ಅವಧಿಯಲ್ಲಿ ಬೈಲಾ ಕಾರ್ಯಕಾರಿ ಸಮಿತಿ ಸದಸ್ಯತ್ವಕ್ಕೆ ಅರ್ಹತೆಗಳು/ಅನರ್ಹತೆಗಳು ಕಲಂ ಸಂಖ್ಯೆ 04 ರಂತೆ ಮಹಾಸಭೆಗೆ ನೀಡಬೇಕಿರುವ ರೂ.50,000/–ಗಳ ವಾಗ್ದಾನವನ್ನು ಪೂರ್ಣಗೊಳಿಸದ ಶ್ರೀ ವೈ.ಜಿ ರಮೇಶ್‌ಬಾಬುರವರ ನಾಮಪತ್ರ ತಿರಸ್ಕೃತವಾಗಿ, ನಂತರ ಅವರು ಸಹ ಮಾನ್ಯ ನ್ಯಾಯಾಲಯ ದ ಆದೇಶವನ್ನು ತಂದು ಚುನಾವಣಾ ಕಣದಲ್ಲಿ ಉಳಿದುಕೊಂಡರು.

ನಮ್ಮ ಸಂಘದ ಉಪನಿಯಮಗಳಿಗೆ ವಿರುದ್ಧವಾಗಿದ್ದ 9 ನಾಮಪತ್ರಗಳು ತಿರಸ್ಕೃತವಾದವು. ಅಂತೆಯೇ ಅಧ್ಯಕ್ಷರ ಪದವಿಗೆ 4 ನಾಮಪತ್ರಗಳು ಸಲ್ಲಿಕೆಯಾಗಿದ್ದು, ಆ ಪೈಕಿ ಶ್ರೀ ಎಸ್.ಆರ್ ಶ್ರೀಧರಮೂರ್ತಿ, ತುಮಕೂರು ಇವರ ನಾಮಪತ್ರ ತಿರಸ್ಕೃತವಾಯಿತು

ಹಿಂಪಡೆಯುವ ಪ್ರಕ್ರಿಯೆಗೆ ಅಭ್ಯರ್ಥಿಗಳು ಸ್ಪಂದಿಸಿದರು. ಸಂಜೆ ವೇಳೆಗೆ ಸುಮಾರು 20 ಜಿಲ್ಲೆಗಳಲ್ಲಿ 60 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದು ಸಮಾಜದ ಐಕ್ಯತೆಗೆ ಮತ್ತು ಸದೃಢ ಸಂಘಟನೆಗೆ ಸಾಕ್ಷಿಯಾಯಿತು. ಇನ್ನೂ ಬೆಂಗಳೂರು ನಗರದಲಿ್ಲ ಅಂತಿಮವಾಗಿ 33 ಅಭ್ಯರ್ಥಿಗಳು, ಹಾಸನ ಜಿಲ್ಲೆಯಲ್ಲಿ 4 ಅಭ್ಯರ್ಥಿಗಳು, ಚಾಮರಾಜನಗರದಲ್ಲಿ 3 ಅಭ್ಯರ್ಥಿಗಳು ಕಣದಲ್ಲಿ ಉಳಿದುಕೊಂಡು ದಿನಾಂಕ 1–5–2022ರಂದು ಚುನಾವಣೆಗಳನ್ನು ಎದುರಿಸಿದರು. ಮುಂದುವರೆದಂತೆ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದ ಶ್ರೀ ಕೆ.ಆರ್ ಕೃಷ್ಣ ಬೆಂಗಳೂರು, ಶ್ರೀ ಎಸ್.ಕೆ ಶೇಷಾಚಲ, ಶಿವಮೊಗ್ಗರವರುಗಳು ಸಂಘಟನೆ ಹಿತದೃಷ್ಟಿಯಿಂದ ನಾಮಪತ್ರಗಳನ್ನು ಹಿಂಪಡೆದ ಕಾರಣದಿಂದ ಶ್ರೀ ಆರ್.ಪಿ ರವಿಶಂಕರ್‌ರವರು ಸತತ 3ನೇ ಅವಧಿಗೆ ಅಧ್ಯಕ್ಷರಾಗಿ ಅವಿರೋದವಾಗಿ ಪುನರಾಯ್ಕೆಯಾದರು.

ದಿನಾಂಕ 1–5–2022 ರಂದು ಚುನಾವಣೆಗಳು ನಡೆದ 3 ಜಿಲ್ಲೆಗಳಲ್ಲಿ ಬೆಂಗಳೂರು ನಗರದಲ್ಲಿ ಅತೀ ಕಡಿಮೆ ಅಂದರೆ ಕೇವಲ ಶೇ 22 ರಷ್ಟು ಮತದಾನವಾಗಿ 3726 ಮತದಾರರು, ಹಾಸನ ಜಿಲ್ಲೆಯಲ್ಲಿ ಶೇ 60% ರಷ್ಟು ಮತದಾನ 2177 ಸದಸ್ಯರು, ಚಾಮರಾಜನಗರದಲ್ಲಿ ಶೇ 65% ಮತದಾನವಾಗಿ 595 ಸದಸ್ಯರು ಮತದಾನ ಮಾಡುವ ಮೂಲಕ ತಮ್ಮ ಹಕ್ಕನ್ನು ಚಲಾಯಿಸಿದರು. ಸಂಜೆ 4.00 ಘಂಟೆಗೆ ಚುನಾವಣೆಗಳು ಮುಗಿದು, ಎಣಿಕೆ ಕಾರ್ಯ ಪ್ರಾರಂಭವಾಗಿ ಸಂಜೆ ಸುಮಾರು 6.00 ಘಂಟೆ ವೇಳೆಗೆ ಚುನಾವಣಾ ಫಲಿತಾಂಶಗಳನ್ನು ಮುಖ್ಯ ಚುನಾವಣಾಧಿಕಾರಿಗಳು ಘೋಷಿಸಿದರು.

ನಮ್ಮ ರಾಜ್ಯದ 23 ಜಿಲ್ಲೆಗಳಲ್ಲಿ 82 ಕಾರ್ಯಕಾರಿ ಸಮಿತಿ ಸದಸ್ಯರ ಆಯ್ಕೆಗಾಗಿ ಮತ್ತು 28 ಜಿಲ್ಲೆಗಳ 69000ಕ್ಕೂ ಮೀರಿದ ಸದಸ್ಯರಿಂದ ನೇರ ಮತದಾನದ ಮೂಲಕ ಅಧ್ಯಕ್ಷರ ಚುನಾವಣೆ ನಡೆಯಬೇಕಿತ್ತು, ಅಂತಹ ಸಂದರ್ಭದಲ್ಲಿ ಆಯಾ ಜಿಲ್ಲೆಯ ಪ್ರಮುಖರು ಸೇರಿಚರ್ಚಿಸಿ, ಸಂಘಟನೆ ಸಮಾಜದ ಹಿತದೃಷ್ಠಿಯಿಂದ ರಾಜ್ಯದ 20 ಜಿಲ್ಲೆಗಳಲ್ಲಿ 60 ಕಾರ್ಯಕಾರಿ ಸಮಿತಿ ಸದಸ್ಯರನ್ನು ಅವಿರೋಧವಾಗಿ ಆಯ್ಕೆ ಮಾಡಿ ಕಳುಹಿಸಿ ಕೊಟ್ಟು ತಮ್ಮ ಜಿಲ್ಲೆಗಳ ಸಂಘಟನಾ ಕೌಶಲ್ಯತೆಯನ್ನು/ಶಕ್ತಿಯನ್ನು ಮೆರೆದಿರುವುದಲ್ಲದೆ ಚುನಾವಣೆಗಳ ಮೂಲಕ ಆಗುತ್ತಿದ್ದ ಖರ್ಚು ವೆಚ್ಚಗಳಿಗೆ, ಕಡಿವಾಣ ಹಾಕಿ ಸಂಘಟಣೆಯ ಶಕ್ತಿ ಭಿನ್ನವಾಗದೆ, ವಿಭಿನ್ನವಾಗಿರುವಂತೆ ಕಾರ್ಯನಿರ್ವಹಿಸಿದ್ದಾರೆ. ಆದರೆ ಬೆಂಗಳೂರು ನಗರ, ಚಾಮರಾಜನಗರ, ಹಾಸನ ಜಿಲ್ಲೆಗಳಲ್ಲಿ ಮಾತ್ರ ಚುನಾವಣೆಗಳು ನಡೆದವು.ಆ ಪೈಕಿ ಹಾಸನ ಜಿಲ್ಲೆಯಲ್ಲಿರುವ ಸದಸ್ಯರ ಸಂಖ್ಯೆ ಕೇವಲ 1630, ಚುನಾವಣಾ ಹೊತ್ತಿನಲ್ಲಿ ವೈಯುಕ್ತಿಕವಾದ ಮತ್ತು 2–3 ದಶಕಗಳ ಹಿಂದೆ ಸಲ್ಲದ ವಿಷಯಕ್ಕೆ ಅನಾವಶ್ಯಕವಾಗಿ ಅರಸಿಕೆರೆಯ ಅಭ್ಯರ್ಥಿಯೊಬ್ಬರು ಚುನಾವಣೆ ನಡೆದು ಮತದಾರರಿಂದ ಮುಖಭಂಗಕ್ಕೆ ಒಳಗಾದದ್ದು ಭವಿಷ್ಯದ–ಅಭ್ಯರ್ಥಿಗಳಿಗೆ ಒಂದು ಪಾಠವೇ ಸರಿ.

ಚಾಮರಾಜನಗರದಲ್ಲಿ ಇದದ್ದು ಕೇವಲ ಸುಮಾರು 560 ಸದಸ್ಯರು, ಅಲ್ಲಿಯೂ ಸಹ ಕೊಳ್ಳೆಗಾಲದ ಅಭ್ಯರ್ಥಿಯು ಸಮಾಜದ ಮುಖಂಡರ ಮಾತನ್ನು ಧಿಕ್ಕರಿಸಿ, ಸಮಾಜಕ್ಕಿಂತಲೂ ನಾನೇ...... ಎಂದು ಅಭ್ಯರ್ಥಿಯೊಬ್ಬರು ಚುನಾವಣೆಗೆ ಮುನ್ನುಡಿ ಬರೆದರು, ಆದರೆ ಅಂತಹ ಉದ್ಧಟತನವನ್ನು ಮತದಾರರು ಸಹಿಸಲಿಲ್ಲ, ಈ ಘಟನೆಯೂ ಸಹ ಭವಿಷ್ಯಕ್ಕೆ ಒಂದು ಪಾಠವೇ, ಸಂಘಕ್ಕಿಂತಲೂ ವ್ಯಕ್ತಿ ಮುಖ್ಯವಲ್ಲ ಎನ್ನುವುದನ್ನು ನಾವು ಕಲಿಯಬೇಕಿದೆ.

ಬೆಂಗಳೂರು ನಗರ, 17600ಕ್ಕೂ ಮೀರಿ ಮತಗಳನ್ನು ಹೊಂದಿದ ರಾಜಧಾನಿಯೂ ಹೌದು, ಆಡಳಿತ ಶಕ್ತಿ ಕೇಂದ್ರವೂ ಹೌದು. ಹಲವಾರು ಕಾರ್ಯಕ್ರಮಗಳ ಯಶಸ್ವಿಗೆ ಆರ್ಥಿಕ ಸಂಗ್ರಹಣೆಗೆ ಪ್ರಮುಖ ನಗರವೂ ಹೌದು, 18 ಸೀಟುಗಳಿಗೆ ಸುಮಾರು 53 ಅಭ್ಯರ್ಥಿಗಳು ಸ್ಪರ್ಧಿಸಿ ಅಂತಿಮವಾಗಿ 33 ಅಭ್ಯರ್ಥಿಗಳು ಮೂರು ತಂಡಗಳನ್ನು ಮಾಡಿಕೊಂಡು ಸ್ಪರ್ಧೆಗೆ ಇಳಿದರು. ಅಂತಿಮವಾಗಿ ಆರ್.ಪಿ.ರವಿಶಂಕರ್ ತಂಡದ ಎಲ್ಲಾ 18 ಅಭ್ಯರ್ಥಿಗಳು ಸರಾಸರಿ ಶೇ.80ಕ್ಕೂ ಮೀರಿ ಮತಗಳನ್ನು ಪಡೆದು ಮುಂದಿನ ಐದು ವರ್ಷಗಳಿಗೆ ಮತದಾರ–ರಿಂದ ಸ್ಪಷ್ಟವಾದ ಆದೇಶ ಪಡೆದರು.

ಇವೆಲ್ಲದರ ನಡುವೆ ದಿನಾಂಕ: 21–4–2022ರಂದು ನಾಮಪತ್ರ ಪರಿಶೀಲನೆ ಸಂದರ್ಭದಲ್ಲಿ ದುಷ್ಟತನ ಮೆರೆದು, ಸಮಾಜದಘನತೆಯ ಶಕ್ತಿ ಕೇಂದ್ರದಲ್ಲಿ ನಡೆಸಿದ ಗೂಂಡಾ ಪ್ರವರ್ತನೆ, ನಂತರ ಸಾಮಾಜಿಕ ಜಾಲತಾಣಗಳ ಮೂಲಕ ವೈರಲ್ ಮಾಡಿ, ಆರ್ಯವೈಶ್ಯ ಸಮಾಜದಗೌರವಕ್ಕೆ ಮಸಿ ಬಳಿದವರನ್ನು ಈ ಸಮಾಜ ಸಹಿಸಲಿಲ್ಲ, ಮತ್ತೋಬ್ಬ ವ್ಯಕ್ತಿ ಬೆಂಗಳೂರು ನಗರದ ಮಲ್ಲೇಶ್ವರದ ಉಮೇಶ್‌ಎಂಬುವರು ಮಲ್ಲೇಶ್ವರಂ ಆರ್ಯವೈಶ್ಯ ಸಂಘದ ಮೇಲೆ ಮಾಡಿದ ಆರೋಪವನ್ನು ಮತದಾರರು ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ. ಈ ಮೂಲಕ ನಾವು ತಿಳಿಯಬೇಕಾದ್ದು ಇಷ್ಟೇ, ನಾವು ಮತ್ತೋಬ್ಬರ ಮೇಲೆ ತಪ್ಪು ಹೊರಿಸುವ ಯೋಗ್ಯತೆಯನ್ನು ಹೊಂದಿದ್ದೇವೆಯೇ? ಎಂದು, ನಮ್ಮಜೀವನವೇ ಅಸಹ್ಯವಾಗಿ, ನೂರಾರು ಜನರಿಗೆ ಕಂಟಕ ಆಗಿರುವಾಗ, ಸಮಾಜದಲ್ಲಿ ಪರಿಪೂರ್ಣ ಯೋಗ್ಯತೆಯನ್ನು ಗಳಿಸಿಕೊಳ್ಳದೇ, ಜೀವನದಲ್ಲಿ ಏನು ಸಾಧಿಸದೆ ಅನರ್ಥವಾಗಿ, ಕೇವಲ ಮತ್ತೋಬ್ಬರನ್ನು ಬೈಯುತ್ತಾ, ಸಮಾಜದಕಂಟಕರಾಗಿ ಚುನಾವಣೆಗಳು ಬಂದಾಗ ಮಾತ್ರ ಮುಖವಾಡ ಬದಲಿಸಿದರೆ ಚುನಾವಣೆಗೆಲ್ಲಲು ಸಾಧ್ಯವೇ?

ಇಂದು ಮಹಾಸಭೆ ಸಮಾಜದ ಶಕ್ತಿ ಕೇಂದ್ರವಾಗಿ, ಸಂಘಟನಾ ಕೇಂದ್ರವಾಗಿ ತನ್ನ ಸೇವಾಬಾಹುಗಳನ್ನು ಹತ್ತಾರು ಸೇವಾ ಕ್ಷೇತ್ರಗಳಿಗೆ ವಿಸ್ತರಿಸಿ, ಕೇವಲ ಆರ್ಯವೈಶ್ಯ ಬಂಧುಗಳಿಂದ ಮಾತ್ರವಲ್ಲದೆ ಜಾತ್ಯಾತೀತವಾಗಿ ಎಲ್ಲರೂ ನಮ್ಮ ಅಭಿವೃದ್ಧಿಯನ್ನು ಇಚ್ಚಿಸಿ, ಅಭಿನಂದಿಸಿ, ನಮ್ಮ ಬೆಳವಣಿಗೆಯನ್ನು ಮಾದ–ರಿಯಾಗಿಸಿಕೊಂಡಿರುವುದು ಗೌಪ್ಯವಾಗಿ ಏನೂ ಉಳಿದಿಲ್ಲ. ಕೇವಲ ಕೆಲವೇ ಘಾತುಕ ಶಕ್ತಿಗಳು ಸಮಾಜವನ್ನು ಅಸ್ಥಿರಗೊಳಿಸುವುದನ್ನು ನಮ್ಮ ಬಂಧುಗಳು ಒಪ್ಪುವರೇ? ಯಾರೇ ಆಗಲೀ ಸಮಾಜದ ಅಭಿವೃದ್ಧಿ ಬಯಸಿ ಚುನಾವಣೆಗಳಿಗೆ ಬರುವ ಮೊದಲು ಅವರವರ ಹೃದಯವನ್ನು ಪರಿಶುದ್ದಗೊಳಿಸಿಕೊಂಡರೆ ಅವಕಾಶಗಳು ಅವರಿಗೂ ಲಭ್ಯ. ಇಲ್ಲಿ ತಿಳಿಯಬೇಕಾದ ಮತ್ತೊಂದು ಮುಖ್ಯ ವಿಷಯಎಂದರೆ, 21–4–2022ರಂದು ಮಹಾಸಭೆ ಕಛೇರಿಯಲ್ಲಿ ದಾಂದಲೆ ನಡೆಸಿದ ವ್ಯಕ್ತಿಗಳ ಪೈಕಿ ಇಬ್ಬರು ಮಹಾಮಂಡಳದಿಂದ ರಾಜೀನಾಮೆ ನೀಡಿ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದವರು ಎಂಬುದು ಗಮನಿಸಬೇಕಾದ ಅಂಶ.

ಬಂಧುಗಳೇ ಚುನಾವಣೆಗಳ ಮೂಲಕ ಸಮಾಜ ಮತ್ತಷ್ಟು ಸದೃಡವಾಗಬೇಕು. ವಿಶಾಲವಾಗಿ ಬೆಳೆಯಬೇಕು. ಸಾವಿರಾರು ಅಬಲ ಕುಟುಂಬಗಳ ಅಭಿವೃದ್ದಿ ಕೇಂದ್ರವಾಗಬೇಕು. ಆರ್ಯವೈಶ್ಯರ ಕೀರ್ತಿ ಮುಗಿಲೆತ್ತರಕ್ಕೇರಬೇಕು ಎಂದರೇ, ನಮ್ಮ ಗೌರವನೀಯ ಸದಸ್ಯರು ಸದಾ ಜಾಗೃತರಾಗಿರಬೇಕು, ಮಹಾಸಭೆಯ ಕಾರ್ಯಕ್ರಮಗಳಲ್ಲಿ ಸಕ್ರಿಯರಾಗಿ ಭಾಗವಹಿಸಬೇಕು. ಮಹಾಸಭೆ ನನ್ನದು ಎನ್ನುವ ಭಾವನೆ ಪ್ರತೀ ಸದಸ್ಯರ ಹೃದಯದಲ್ಲಿ ಝೇಂಕರಿಸಿದರೆ ಮಹಾಸಭೆ ನಮ್ಮದಾಗುತ್ತದೆ. ನನ್ನದು ಹೋಗಿ ನಮ್ಮದು ಆದಾಗ ಮಾತ್ರ ಸಮಸ್ಯೆ ಮುಕ್ತ ಸಮಾಜ ನಿರ್ಮಾಣಕ್ಕೆ ರಾಜಮಾರ್ಗ.

ಚುನಾವಣೆಗಳು ಮುಗಿದವು.ಇನ್ನೂಅಭಿವೃದ್ಧಿ ಕಾರ್ಯಗಳೇ ಮುಖ್ಯ, ಬನ್ನಿ, ಜೊತೆಗೂಡಿ ಸಮೃದ್ಧ ಸಮಾಜ ನಿರ್ಮಾಣದ ನಿರ್ಮಾತೃಗಳಾಗಿ. ಹಸಿದವರ, ಅನಾಥರ, ಅಬಲರ, ಆಶಕ್ತರ ಪಾಲಿಗೆ ಮಹಾಸಭೆ ಆಪತ್‌ಭಾಂದವ ಎನ್ನುವಂತೆ ಸಂಘ ಕಟ್ಟೋಣ...

# ಅಭಿನಂದನೆಗಳು

ಏಷ್ಯಾ ಖಂಡದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿರುವ ಮತ್ತು ವಿಶ್ವದಾದ್ಯಂತ ತನ್ನ ವಿದ್ಯಾರ್ಥಿ ಸಮೂಹವನ್ನು ಹೊಂದಿ, ಶಿಕ್ಷಣ ಕ್ಷೇತ್ರದ ಮೂಲಕ ದೇಶದ ಅಭ್ಯುದಯಕ್ಕೆ ಸೇವೆ ಸಲ್ಲಿಸುತ್ತಾ, ವಿಶ್ವದಲ್ಲಿ ಭಾರತ ದೇಶದ ಘನತೆ ಗೌರವಗಳನ್ನು ಎತ್ತಿ ಹಿಡಿದ ಹಾಗೂ ಲಕ್ಷಾಂತರ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವುದರೊಂದಿಗೆ, ವಿದ್ಯಾರ್ಥಿಗಳ ಭವ್ಯ ಭವಿಷ್ಯ ರೂಪಿಸುತ್ತಿರುವ ಆರ್ ವಿ ಶಿಕ್ಷಣ ಸಮೂಹ ಸಂಸ್ಥೆಗಳು, ಪ್ರಸ್ತುತ ಆರ್.ವಿ ವಿಶ್ವವಿದ್ಯಾಲಯವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯ ಅಧ್ಯಕ್ಷರಾಗಿ ಶ್ರೀ ಎಂ ಪಿ ಶ್ಯಾಂರವರು ಆಯ್ಕೆಯಾಗಿರುತ್ತಾರೆ, ಶ್ರೀ ಎಂ ಪಿ ಶ್ಯಾಂ ರವರು ಹಾಲಿ ಅಧ್ಯಕ್ಷರಾಗಿದ್ದ ಡಾ॥ ಎಂ ಕೆ ಪಾಡುರಂಗ ಶೆಟ್ಟಿಯವರ ಪುತ್ರರಾಗಿದ್ದಾರೆ.



**ಶ್ರೀ ಎಂ ಪಿ ಶ್ಯಾಂ**

ಶ್ರೀ ಎಂ ಪಿ ಶ್ಯಾಂರವರು ಆಟೋ ಮೊಬೈಲ್ ಕ್ಷೇತ್ರದಲ್ಲಿ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿದ್ದಾರೆ. ತಮ್ಮ ವ್ಯಾಪಾರ ವ್ಯವಹಾರಗಳ ಮೂಲಕ ಸುಮಾರು 5000 ಜನಕ್ಕೆ ಉದ್ಯೋಗ ನೀಡಿರುವ ಶ್ರೀಯುತರು ಸಾಮಾಜಿಕ ಕ್ಷೇತ್ರದಲ್ಲಿ ಎಲೆಮರೆ ಕಾಯಂತೆ ಕಾರ್ಯ ನಿರ್ವಹಿಸುತ್ತಾ, ದೇಶದ ಅಭಿವೃದ್ಧಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವರು. ನಮ್ಮ ಸಮಾಜದ ಅಮೂಲ್ಯ ರತ್ನ ಶ್ರೀ ಎಂ ಪಿ ಶ್ಯಾಂರವರ ಅಧ್ಯಕ್ಷತೆಯಲ್ಲಿ ಆರ್ ವಿ ಶಿಕ್ಷಣ ಸಂಸ್ಥೆಗಳು ವಿಶ್ವದೆಲ್ಲೆಡೆ ತನ್ನ ಕದಂಬ ಬಾಹುಗಳನ್ನು ವಿಸ್ತರಿಸಿ, ವಿಶ್ವದ ಕೋಟ್ಯಾನುಕೋಟಿ ಯುವಜನರ ಭವ್ಯ ಭವಿಷ್ಯ ಬರೆಯುವಂತಹ ಪ್ರತಿಷ್ಠಿತ ಸಂಸ್ಥೆಯಾಗಿ ಬೆಳೆಯಲೆಂದು ಕರ್ನಾಟಕ ಆರ್ಯವೈಶ್ಯ ಮಹಾಸಭಾ ಶ್ರೀ ಎಂ ಪಿ ಶ್ಯಾಂರವರಿಗೆ ಶುಭ ಹಾರೈಸಿ, ಅಭಿನಂದನೆಗಳನ್ನು ಕೋರುತ್ತದೆ.

**ಸಮೃದ್ಧ – ಸದೃಢ ರಾಷ್ಟ್ರ ನಿರ್ಮಾಣಕ್ಕೆ ಮೌಲ್ಯಾಧಾರಿತ ಶಿಕ್ಷಣ ಅಗತ್ಯ. ಅಂತೆಯೇ ಮಕ್ಕಳಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಹೊರತಂದು ವ್ಯಕ್ತಿಯನ್ನು ಶಕ್ತಿಯನ್ನಾಗಿ ರೂಪಿಸಿ ದೇಶದ ಆಸ್ತಿಯನ್ನಾಗಿ ಮಾಡುವ ಅದ್ಭುತ ಶಕ್ತಿ.** ಶಿಕ್ಷಣಕ್ಕೆ ಅದೂ ಮೌಲ್ಯಾಧಾರಿತ ಮತ್ತು ಸಂಸ್ಕಾರಯುತ ಶಿಕ್ಷಣದಿಂದ ಮಾತ್ರ ಸಾಧ್ಯ ಎಂಬ ಏಕೋದ್ದೇಶದಿಂದ ಕಳೆದ ಮೂರು ದಶಕಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಾ KG to PG ಎನ್ನುವಂತೆ ಪ್ರಾಥಮಿಕ ಶಿಕ್ಷಣದ ಆದಿಯಾಗಿ ಉನ್ನತ ಶಿಕ್ಷಣದವರೆವಿಗೂ ಸಂಸ್ಥೆಗಳನ್ನು ಕಟ್ಟಿ ಬೆಳೆಸಿ, ಪೋಷಿಸಿ ತನ್ಮೂಲಕ ಪ್ರತೀವರ್ಷ ರಾಷ್ಟ್ರ ನಿರ್ಮಾಣಕ್ಕೆ ಸಂಕಲ್ಪ ತೊಟ್ಟ ಸಾವಿರಾರು ಯುವಶಕ್ತಿಗಳನ್ನು ನಾಡಿಗೆ ಸಮರ್ಪಣೆ ಮಾಡುತ್ತಿರುವ ಶ್ರೇಷ್ಠ ಕಾಯಕ ಯೋಗಿ ಶ್ರೀ ಎ ವಿ ಎಸ್ ಮೂರ್ತಿ. ದೇಶ ಕಂಡ ಅತ್ಯುತ್ತಮ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿ, ಇಂದಿಗೂ ಶಿಕ್ಷಣವನ್ನು ಸೇವೆಯೆಂದು ಪರಿಗಣಿಸಿ ಅತ್ಯಂತ ಪಾರದರ್ಶಕ ಗುಣ ಮಟ್ಟದ, ಸಂಸ್ಕಾರಯುತ ಶಿಕ್ಷಣ ಕ್ರಾಂತಿಯಿಂದ ವಿಶ್ವದೆಲ್ಲೆಡೆ ತಮ್ಮ ವಿದ್ಯಾರ್ಥಿಗಳು ಬೆಳೆಯುವಂತೆ ಕಾರ್ಯ ನಿರ್ವಹಿಸುತ್ತಿರುವ ಆರ್.ವಿ ಸಮೂಹ ಶಿಕ್ಷಣ ಸಂಸ್ಥೆಗಳು ಮತ್ತು ಆರ್.ವಿ ವಿಶ್ವವಿದ್ಯಾಲಯದ ಕಾರ್ಯದರ್ಶಿಗಳಾಗಿ ಅನುಪಮ ಸೇವೆ ಸಲ್ಲಿಸಿರುವ ಶಿಕ್ಷಣ ಕ್ಷೇತ್ರದ ಭೀಷ್ಮ ಶ್ರೀ ಎ ವಿ ಎಸ್ ಮೂರ್ತಿಯವರ ಸೇವೆಯನ್ನು ಗುರುತಿಸಿ ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಒಂದಾದ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ ತನ್ನ 17ನೇ ಘಟಿಕೋತ್ಸವ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರು ಹಾಗೂ ಕುಲಾಧಿಪತಿಗಳಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಹಾಗೂ ಉಪಕುಲಪತಿಗಳಾದ ಡಾ॥ ವಿಜಯಶಂಕರ್‌ರವರ ಘನ ಉಪಸ್ಥಿತಿಯಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನು ಪ್ರಧಾನ ಮಾಡಿರುತ್ತಾರೆ.



**ಶ್ರೀ ಎ ವಿ ಎಸ್ ಮೂರ್ತಿ**

ಶ್ರೀ ಎ ವಿ ಎಸ್ ಮೂರ್ತಿ ಆರ್ಯವೈಶ್ಯ ಸಮೂಹದ ಆಸ್ತಿ. ಇವರಿಗೆ ಸಂದ ಗೌರವ, ರಾಜ್ಯದ ಶಿಕ್ಷಣ ಕ್ಷೇತ್ರಕ್ಕೆ ಸಂದ ಗೌರವ ಎಂದರೆ ತಪ್ಪಾಗಲಾರದು. ಶಿಕ್ಷಣ ಕ್ಷೇತ್ರದ ದಿಗ್ಗಜ ಶ್ರೀ ಎ ವಿ ಎಸ್ ಮೂರ್ತಿಯವರು ಗೌ॥ ಡಾಕ್ಟರೇಟ್ ಪದವಿಗೆ ಬಾಜನರಾಗಿರುವುದನ್ನು ಕರ್ನಾಟಕ ಆರ್ಯವೈಶ್ಯ ಮಹಾಸಭಾ ಹೃದಯಪೂರ್ವಕವಾಗಿ ಅಭಿನಂದಿಸುತ್ತದೆ.

ಭಾರತ ದೇಶದ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಬ್ರಿಗೇಡ್ ಸಂಸ್ಥೆ ಧೃವತಾರೆಯಾಗಿ ಮಿನುಗುತ್ತಿರುವ, ಹುಣ್ಣಿಮೆ ಚಂದ್ರನಂತೆ ಬೆಳಗುತ್ತಿರುವ ದೈತ್ಯ ಕಂಪೆನಿಯಾಗಿದೆ. ವಿಶ್ವದೆಲ್ಲೆಡೆ ಲಭ್ಯವಿರುವ ಹೊಸ ತಂತ್ರಜ್ಞಾನಿಗಳನ್ನು ವೈವಿಧ್ಯಮಯತೆಯನ್ನು ನಮ್ಮ ದೇಶದಲ್ಲಿ ಪರಿಚಯಿಸಿ ಅಂತರಾಷ್ಟ್ರೀಯ ಗುಣಮಟ್ಟದ ಸವಲತ್ತುಗಳನ್ನುಳ್ಳ ಪ್ರತಿಷ್ಠಿತ ಕಟ್ಟಡಗಳನ್ನು ನಿರ್ಮಾಣ ಮಾಡಿ ಜನಸಾಮಾನ್ಯರ ಜೀವನ ಶೈಲಿಗೆ ಹೊಸ ರೂಪವನ್ನು ಕೊಟ್ಟಂತಹ ಕೀರ್ತಿ ಬ್ರಿಗೇಡ್ ಸಂಸ್ಥೆಗೆ ಸೇರುತ್ತದೆ. ದೇಶದಲ್ಲಿ ಸುಂದರ ಕಟ್ಟಡಗಳನ್ನು ನಿರ್ಮಾಣ ಮಾಡಿ ಸುಮಾರು 250ಕ್ಕೂ ಹೆಚ್ಚು ಅಪಾರ್ಟ್‌ಮೆಂಟ್‌ಗಳ ಮೂಲಕ 7 ಕೋಟಿ 20 ಲಕ್ಷ ಚ ಅ ಗೂ ಮೀರಿದ ನಿರ್ಮಾಣದಲ್ಲಿ ಲಕ್ಷಾಂತರ ನಾಗರೀಕರಿಗೆ ಸುಂದರ ಸೂರನ್ನು, ಆನಂದದ ಜೀವನವನ್ನು ನೀಡಿರುವ ಬ್ರಿಗೇಡ್ ಸಂಸ್ಥೆಯು ಅತ್ಯುತ್ತಮ ರಿಯಲ್ ಎಸ್ಟೇಟ್ ಸಂಸ್ಥೆಯೆಂಬ ರಾಷ್ಟ್ರೀಯ ಪ್ರಶಸ್ತಿಗೆ ಭಾಜನವಾಗಿದೆ.

ಬ್ರಿಗೇಡ್ ಸಂಸ್ಥೆಯ ಮೂಲಕ ದಕ್ಷಿಣ ಭಾರತದೆಲ್ಲೇಡೆ 50ಕ್ಕೂ ಹೆಚ್ಚು ಸ್ಟಾರ್ ಹೋಟೆಲ್‌ಗಳು ಬೃಹತ್ ಪ್ರಮಾಣದ ಕೋಟ್ಯಾಂತರ ಚದುರಡಿಗಳ ವಾಣಿಜ್ಯ ಸಂಕೀರ್ಣಗಳು, ಮೌಲ್ಯಾಧಾರಿತ ಶಿಕ್ಷಣ ಸಂಸ್ಥೆಗಳು ಮೂಡಿ ಬಂದಿದ್ದು, ದೇಶದ ಜನತೆಗೆ ಹೊಸ ಜೀವನ ಶೈಲಿಯನ್ನು ಒದಗಿಸಿಕೊಟ್ಟ ಕೀರ್ತಿಗೆ ಪಾತ್ರವಾಗಿದೆ. ಬ್ರಿಗೇಡ್ ಸಂಸ್ಥೆಯು ರಿಯಲ್ ಎಸ್ಟೇಟ್ ಉದ್ಯಮದಲ್ಲಿ ದೇಶದ ಕೀರ್ತಿ–ಪ್ರತಿಷ್ಠೆಗಳನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆಸಿದ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಂತಹ ಬೃಹತ್ ಉದ್ಯಮದ ನೇತಾರರು ಆರ್ಯವೈಶ್ಯ ಕುಲಜರು ಆಗಿರುವ **ಶ್ರೀ ಎಂ ಆರ್ ಜಯಶಂಕರ್**ರವರ ಈ ಅಭೂತಪೂರ್ವ ಸಾಧನೆಯನ್ನು ಪುರಸ್ಕರಿಸಿ **ಬೆಂಗಳೂರು ನಗರ ವಿಶ್ವ ವಿದ್ಯಾಲಯ ದಿನಾಂಕ 11–4–2022** ರಂದು ನಡೆದ



**ಶ್ರೀ ಎಂ ಆರ್ ಜಯಶಂಕರ್**

ಘಟಿಕೋತ್ಸವದಲ್ಲಿ ಘನತೆವೆತ್ತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್‌ರವರ ಘನ ಉಪಸ್ಥಿತಿಯಲ್ಲಿ, ಪದ್ಮವಿಭೂಷಣ ಡಾ॥ ಕೆ ಎಸ್ ಕಸ್ತೂರಿ ರಂಗನ್, ಮಾಜಿ ಅಧ್ಯಕ್ಷರು ಇಸ್ರೋ, ಡಾ॥ ಸಿ ಎನ್ ಅಶ್ವತ್ಥ ನಾರಾಯಣ, ಮಾನ್ಯ ಉನ್ನತ ಶಿಕ್ಷಣ ಸಚಿವರು ಕರ್ನಾಟಕ ಸರ್ಕಾರ, ಮತ್ತು ಉಪಕುಲಪತಿಗಳಾದ ಪ್ರೊ॥ ಲಿಂಗರಾಜ್ ಗಾಂಧಿ ಇತರ ಗಣ್ಯರ ಸಮ್ಮುಖದಲ್ಲಿ **ಬ್ರಿಗೇಡ್ ಸಂಸ್ಥೆಯ ಸಿ ಎಂ ಡಿ ಶ್ರೀ ಎಂ ಆರ್ ಜಯಶಂಕರ್‌ರವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು** ನೀಡಿ ಪುರಸ್ಕರಿಸಲಾಯಿತು.

ಶ್ರೀಯುತರಿಗೆ ಸಂದ ಗೌರವ ಕರ್ನಾಟಕ ರಾಜ್ಯಕ್ಕೆ ಸಂದ ಗೌರವವಾಗಿದೆ. ರಾಜ್ಯದ ಸಮಸ್ತ ಆರ್ಯವೈಶ್ಯ ಬಂಧುಗಳಿಗೆ ಆನಂದವನ್ನುಂಟು ಮಾಡಿದೆ. ಇವರ ಸಾಧನೆಯನ್ನು ಕರ್ನಾಟಕ ಆರ್ಯವೈಶ್ಯ ಮಹಾಸಭಾ ಹೃದಯಪೂರ್ವಕವಾಗಿ ಅಭಿನಂದಿಸುತ್ತದೆ.

ಮುದ್ರಕರು: ಗಿರೀಶ್ ಪ್ರಿಂಟರ್ಸ್, 163, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020 ಇ-ಮೇಲ್ : info@gireeshprinters.com website : www.gireeshprinters.com
ಸಂಪಾದಕರು: ರಾ.ಪ. ರವಿಶಂಕರ್ ಮತ್ತು ಪ್ರಕಾಶಕರು: ಎಸ್ ಕೆ. ಶೇಷಾಚಲ ವಾರ್ತಾಪತ್ರ ಸಮಿತಿಯ ಚೇರ್‌ಮನ್, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು-09 ಫೋನ್: 22206151/22206152